ಸಂಪುಟ 01 | ಸಂಚಿಕೆ 201 ಶುಕ್ರವಾರ 25 ಸೆಪ್ಟೆಂಬರ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

MA ವಹಾಬ್
ಪ್ರಧಾನ ಸಂಪಾದಕರು

ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಅಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

ಈ ದಿನದ ವಿಶೇಷ

1) ವಿಶ್ವ ಫಾರ್ಮಸಿಸ್ಟ್ ದಿನ (World Pharmacists Day)

ಔಷಧಿಗಳ ಸುರಕ್ಷಿತ ಬಳಕೆ, ಆರೋಗ್ಯ ಸೇವೆ ಮತ್ತು ಫಾರ್ಮಸಿಸ್ಟ್‌ಗಳ ಮಹತ್ವವನ್ನು ಗುರುತಿಸುವ ದಿನ. 2026ರ ಥೀಮ್: "Empowering pharmacists for healthier futures" ಉತ್ತಮ ಆರೋಗ್ಯಕರ ಭವಿಷ್ಯಕ್ಕಾಗಿ ಫಾರ್ಮಸಿಸ್ಟ್‌ಗಳನ್ನು ಸಬಲೀಕರಿಸುವುದು.

2)ಅಂತ್ಯೋದಯ ದಿನ (Antyodaya Diwas)

ಅಂತ್ಯೋದಯ ದಿನ 25 ಸೆಪ್ಟೆಂಬರ್ 2026, ಶುಕ್ರವಾರ ಆಚರಿಸಲಾಗುತ್ತದೆ. ಇದು ಪಂಡಿತ್ ದೀನದಯಾಳ್ ಉಪಾಧ್ಯಾಯ ಅವರ ಜನ್ಮದಿನದ ಸ್ಮರಣಾರ್ಥ

ಸುಭಾಷಿತ

ನಿಮ್ಮ ಅಸುರಕ್ಷಿತ ಆಲೋಚನೆಗಳು ನಿಮಗೆ ಹಾನಿ ಮಾಡಿದಷ್ಟು, ಬದ್ಧವೈರಿಯೂ ಮಾಡಲಾರ.

-ಗೌತಮ ಬುದ್ಧ

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

ಶಿಕ್ಷಕರಿಗೆ ಬೋಧನೇತರ ಕರ್ತವ್ಯಗಳಿಗೆ ಕಡಿವಾಣ
ರಾಜ್ಯ ಸರ್ಕಾರದಿಂದ ಹೊಸ ಕಾನೂನು

ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ ಶಿಕ್ಷಕರನ್ನು ಬೋಧನೆಯ ಹೊರಗಿನ ಕರ್ತವ್ಯಗಳಿಗೆ ನಿಯೋಜಿಸುವ ಪದ್ಧತಿಗೆ ಕಡಿವಾಣ ಹಾಕಲು ಕರ್ನಾಟಕ ಸರ್ಕಾರ ಹೊಸ ಕಾನೂನಿನ ಕರಡು ಸಿದ್ಧಪಡಿಸಿದೆ.

ಮತದಾರರ ಪಟ್ಟಿ ಪರಿಷ್ಕರಣೆ, ಚುನಾವಣೆ ಹಾಗೂ ಜನಗಣತಿಯಂತಹ ಕರ್ತವ್ಯಗಳಿಂದ ಶಿಕ್ಷಕರನ್ನು ಸಾಧ್ಯವಾದಷ್ಟು ದೂರವಿಟ್ಟು, ಅವರ ಮೂಲ ಜವಾಬ್ದಾರಿಯಾದ ತರಗತಿ ಬೋಧನೆಗೆ ಆದ್ಯತೆ ನೀಡುವುದು ಕರಡು ಕಾಯ್ದೆಯ ಪ್ರಮುಖ ಉದ್ದೇಶವಾಗಿದೆ. ಕರಡು ಪ್ರಸ್ತಾವನೆಯನ್ನು ವಿವಿಧ ಇಲಾಖೆಗಳ ಒಪ್ಪಿಗೆಗಾಗಿ ಕಳುಹಿಸಲಾಗಿದೆ. 2026ರ ಜೂನ್ 20ರಿಂದ ಕರ್ನಾಟಕದಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆ ಆರಂಭವಾಗಿತ್ತು. ಜೂನ್ 30ರಿಂದ ಮನೆ-ಮನೆಗೆ ತೆರಳಿ ಮಾಹಿತಿ ಸಂಗ್ರಹಿಸುವ ಕಾರ್ಯ ಆರಂಭಗೊಂಡಿದ್ದು, ರಾಜ್ಯದಲ್ಲಿ ಸಾವಿರಾರು ಶಿಕ್ಷಕರು ಬೂತ್ ಮಟ್ಟದ ಅಧಿಕಾರಿಗಳಾಗಿ ನಿಯೋಜಿತರಾಗಿದ್ದರು. ಎಸ್‌ಐಆರ್ ವೇಳಾಪಟ್ಟಿಯ ಪ್ರಕಾರ ಅಂತಿಮ ಮತದಾರರ ಪಟ್ಟಿ ಪ್ರಕಟಿಸುವ ಪ್ರಕ್ರಿಯೆಯೂ ಸೆಪ್ಟೆಂಬರ್-ಅಕ್ಟೋಬರ್ ಅವಧಿಯವರೆಗೆ ಮುಂದುವರಿದಿದೆ.

ಈ ಹಿನ್ನೆಲೆಯಲ್ಲಿ ಶಿಕ್ಷಕರು ಶಾಲೆಯಿಂದ ಹೊರಗಿದ್ದು, ತರಗತಿ ಬೋಧನೆಗೆ ಹೊಡೆತ ಬೀಳುತ್ತಿದೆ ಎಂಬ ಆತಂಕ ವ್ಯಕ್ತವಾಗಿತ್ತು. ಜೂನ್‌ನಲ್ಲಿಯೇ ಶಿಕ್ಷಕರ ಬೋಧನಾ ಸಮಯ ಕಡಿಮೆಯಾಗುತ್ತಿರುವ ಬಗ್ಗೆ ವರದಿಗಳು ಬಂದಿದ್ದವು. ಶಿಕ್ಷಕರ ಕೊರತೆ ಇರುವ ಶಾಲೆಗಳಲ್ಲಿ ಕೆಲವೇ ಶಿಕ್ಷಕರನ್ನು ಬೋಧನೇತರ ಕೆಲಸಕ್ಕೆ ನಿಯೋಜಿಸಿದರೂ ಇಡೀ ವೇಳಾಪಟ್ಟಿಯ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಶಿಕ್ಷಣ ವಲಯದವರು ಹೇಳಿದ್ದರು.



ಕರಡು ಕಾಯ್ದೆಯಲ್ಲಿ ಏನಿದೆ?

ಸರ್ಕಾರದ ಪ್ರಸ್ತಾವಿತ ವ್ಯವಸ್ಥೆಯ ಅತ್ಯಂತ ಪ್ರಮುಖ ಅಂಶವೆಂದರೆ ಬೋಧಕೇತರ ಸಾರ್ವಜನಿಕ ಕರ್ತವ್ಯ ನಿರ್ವಹಣಾ ಪಟ್ಟಿ ರಚಿಸುವುದು. ರಾಜ್ಯದ ವಿವಿಧ ಇಲಾಖೆಗಳು, ಶಾಸನಬದ್ಧ ಮಂಡಳಿಗಳು, ನಿಗಮಗಳು, ಸಾರ್ವಜನಿಕ ವಲಯದ ಸಂಸ್ಥೆಗಳು, ನಿವೃತ್ತ ಸರ್ಕಾರಿ ನೌಕರರು ಹಾಗೂ ತರಬೇತಿ ಪಡೆದ ಸ್ವಯಂಸೇವಕರ ಜಿಲ್ಲಾವಾರು ಪಟ್ಟಿಯನ್ನು ಸಿದ್ಧಪಡಿಸುವ ಉದ್ದೇಶವಿದೆ. ಶಿಕ್ಷಕರನ್ನು ನಿಯೋಜಿಸುವ ಮೊದಲು ಈ ಲಭ್ಯವಿರುವ ಮಾನವ ಸಂಪನ್ಮೂಲವನ್ನು ಬಳಸಿಕೊಳ್ಳಬೇಕಾಗುತ್ತದೆ. ಅಂದರೆ, ಮೊದಲ ಆಯ್ಕೆ ಬೋಧಕೇತರ ಸಿಬ್ಬಂದಿ; ಶಿಕ್ಷಕರು ಕೊನೆಯ ಆಯ್ಕೆ ಎಂಬ ವ್ಯವಸ್ಥೆ ರೂಪಿಸುವುದು ಸರ್ಕಾರದ ಉದ್ದೇಶವಾಗಿದೆ.

ಡಿಸಿ ಪ್ರಮಾಣಪತ್ರ ಕಡ್ಡಾಯ:

ಬೋಧಕೇತರ ಕರ್ತವ್ಯಕ್ಕೆ ಶಿಕ್ಷಕರನ್ನು ನಿಯೋಜಿಸುವ ಮುನ್ನ ಸಂಬಂಧಪಟ್ಟ ಜಿಲ್ಲಾಧಿಕಾರಿಯಿಂದ ಲಭ್ಯವಿಲ್ಲದ ಪ್ರಮಾಣಪತ್ರ ಪಡೆಯುವುದು ಕಡ್ಡಾಯಗೊಳಿಸುವ ಪ್ರಸ್ತಾವನೆ ಇದೆ. ಜಿಲ್ಲೆಯಲ್ಲಿ ಬೋಧಕೇತರ ಸಿಬ್ಬಂದಿ ಅಥವಾ ಪರ್ಯಾಯ ಮಾನವ ಸಂಪನ್ಮೂಲ ಲಭ್ಯವಿಲ್ಲ ಎಂಬುದನ್ನು ಜಿಲ್ಲಾಧಿಕಾರಿ ದೃಢಪಡಿಸಿದ ನಂತರವೇ ಶಿಕ್ಷಕರ ನಿಯೋಜನೆಗೆ ಮುಂದಾಗಬಹುದು. ಈ ಮೂಲಕ ಯಾವುದೇ ಇಲಾಖೆಯು ತನ್ನ ಅನುಕೂಲಕ್ಕಾಗಿ ನೇರವಾಗಿ ಶಾಲಾ ಶಿಕ್ಷಕರನ್ನು ಕರ್ತವ್ಯಕ್ಕೆ ಕರೆಸಿಕೊಳ್ಳುವುದನ್ನು ನಿಯಂತ್ರಿಸುವ ಉದ್ದೇಶ ಹೊಂದಲಾಗಿದೆ.

ಶಾಲೆ ಮುಚ್ಚುವಂತಿಲ್ಲ:

ಪ್ರಸ್ತಾವಿತ ಕಾನೂನಿನಲ್ಲಿ ಮತ್ತೊಂದು ಪ್ರಮುಖ ಅಂಶವೆಂದರೆ, ಶಿಕ್ಷಕರನ್ನು ಹೊರಗಿನ ಕರ್ತವ್ಯಕ್ಕೆ ಕಳುಹಿಸುವ ಕಾರಣಕ್ಕೆ ಶಾಲೆ ಅಥವಾ ತರಗತಿಯನ್ನು ಬೋಧಕರಿಲ್ಲದೆ ಬಿಡುವಂತಿಲ್ಲ. ಶಾಲಾ ಅವಧಿಯಲ್ಲಿ ಕನಿಷ್ಠ ಒಬ್ಬ ಖಾಯಂ ಶಿಕ್ಷಕರಾದರೂ ಶಾಲೆಯಲ್ಲಿ ಹಾಜರಿರಬೇಕು. ನಿಗದಿತ ವಿದ್ಯಾರ್ಥಿ-ಶಿಕ್ಷಕ ಅನುಪಾತವೂ ಕಡ್ಡಾಯವಾಗಿ ಕಾಪಾಡಬೇಕಾಗುತ್ತದೆ. ಇದರಿಂದ ವಿಶೇಷವಾಗಿ ಒಬ್ಬ ಅಥವಾ ಇಬ್ಬರು ಶಿಕ್ಷಕರಿರುವ ಗ್ರಾಮೀಣ ಶಾಲೆಗಳಲ್ಲಿ ಸಂಪೂರ್ಣ ಸಿಬ್ಬಂದಿಯನ್ನು ಹೊರಗಿನ ಕೆಲಸಕ್ಕೆ ಕಳುಹಿಸುವ ಪರಿಸ್ಥಿತಿಗೆ ಕಡಿವಾಣ ಬೀಳಲಿದೆ.

ಸಚಿವ ರಿಜ್ವಾನ್ ಹರ್ಷದ್ ಹುಟ್ಟುಹಬ್ಬ ಕೆಆರ್. ಆಸ್ಪತ್ರೆಯ ರೋಗಿಗಳಿಗೆ ಹಣ್ಣುಹಂಪಲು ವಿತರಣೆ – ಕಾಂಗ್ರೆಸ್ ಮುಖಂಡ ಮೋಸಿನ್

ನೈಜ್ಯ ದೆಸೆ ನ್ಯೂಸ್

ತಾಂಡವಪುರ: ಸಚಿವ ರಿಜ್ವಾನ್ ಅರ್ಷದ್ ಅವರ ಹುಟ್ಟುಹಬ್ಬದ ಅಂಗವಾಗಿ ಕಾಂಗ್ರೆಸ್ ಮುಖಂಡ ಮೋಸಿನ್ ಅವರ ನೇತೃತ್ವದಲ್ಲಿ ಮೈಸೂರಿನ ಕೆ.ಆರ್. ಆಸ್ಪತ್ರೆಯ ರೋಗಿಗಳಿಗೆ ಹಣ್ಣುಹಂಪಲು ವಿತರಿಸಿ, ಸಮಾಜಮುಖಿ ರೀತಿಯಲ್ಲಿ ಹುಟ್ಟುಹಬ್ಬವನ್ನು ಆಚರಿಸಲಾಯಿತು.

ಹುಟ್ಟುಹಬ್ಬದ ಸಂಭ್ರಮವನ್ನು ಕೇವಲ ಆಚರಣೆಗೆ ಸೀಮಿತಗೊಳಿಸದೆ, ಸಂಕಷ್ಟದಲ್ಲಿರುವ ರೋಗಿಗಳೊಂದಿಗೆ ಹಂಚಿಕೊಳ್ಳುವ ಮೂಲಕ ಮಾನವೀಯ ಸಂದೇಶ ಸಾರಲಾಯಿತು. ಈ ಸಂದರ್ಭದಲ್ಲಿ ಆಸ್ಪತ್ರೆಯ ವಿವಿಧ ವಾರ್ಡ್‌ಗಳಿಗೆ ಭೇಟಿ ನೀಡಿದ ಮೋಸಿನ್ ಹಾಗೂ ಕಾಂಗ್ರೆಸ್ ಕಾರ್ಯಕರ್ತರು ರೋಗಿಗಳ ಆರೋಗ್ಯ ವಿಚಾರಿಸಿ, ಶೀಘ್ರ ಗುಣಮುಖರಾಗುವಂತೆ ಹಾರೈಸಿದರು. ಹಣ್ಣು ಹಂಪಲು ವಿತರಿಸಿ ಶುಭ ಹಾರೈಸಿದರು "ಸಮಾಜದ ಸಂಕಷ್ಟದಲ್ಲಿರುವವರೊಂದಿಗೆ ಸಂತೋಷ ಹಂಚಿಕೊಂಡಾಗಲೇ ಆಚರಣೆಗೆ ನಿಜವಾದ ಅರ್ಥ ಸಿಗುತ್ತದೆ" ಎಂಬ ಆಶಯದೊಂದಿಗೆ ಕಾರ್ಯಕ್ರಮ ನಡೆಸಲಾಯಿತು. ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಹಾಗೂ ಮುಂತಾದವರು ಈ ಸಂದರ್ಭದಲ್ಲಿ ಹಾಜರಿದ್ದರು



ದೇವಸಮುದ್ರ ಸೊಸೈಟಿ ಪ್ರಗತಿ ಹಾದಿ: 2.51 ಲಕ್ಷ ನಿವ್ವಳ ಲಾಭ ಗಳಿಕೆ

ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ : ಸಮೀಪದ ದೇವಸಮುದ್ರ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವು 2025-26ನೇ ಸಾಲಿನಲ್ಲಿ ?2,51,796 ನಿವ್ವಳ ಲಾಭ ಗಳಿಸಿದೆ ಎಂದು ಸಂಘದ ಮುಖ್ಯಕಾರ್ಯನಿರ್ವಾಹಕ ಎಸ್. ಎಸ್. ನಾಗರಾಜ ತಿಳಿಸಿದರು.

ಗ್ರಾಮದ ಸರ್ಕಾರಿ ಶಾಲಾ ಕೊಠಡಿಯಲ್ಲಿ ಬುಧವಾರ ಸಂಘದ ಅಧ್ಯಕ್ಷ ಅಳ್ಳಳ್ಳಿ ಮಂಜುನಾಥ ಅವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಷಿಕ ಮಹಾಜನ ಸಭೆಯಲ್ಲಿ ಅವರು ವರದಿ ಮಂಡಿಸಿದರು. ಸಂಘವು ಪ್ರಸ್ತುತ 2,055 ಸದಸ್ಯರನ್ನು ಹೊಂದಿದ್ದು, ?78.82 ಲಕ್ಷ ಶೇರು ಬಂಡವಾಳ ಹಾಗೂ ?1.23 ಕೋಟಿ ಠೇವಣಿ ಸಂಗ್ರಹಿಸಿದೆ. ಪ್ರಸಕ್ತ ಸಾಲಿನಲ್ಲಿ 604 ಸದಸ್ಯರಿಗೆ 4.92 ಕೋಟಿ ಕೆಸಿಸಿ ಬೆಳೆ ಸಾಲ, 9 ಜನರಿಗೆ



40.58 ಲಕ್ಷ ಮಧ್ಯಮಾವಧಿ ಸಾಲ ಹಾಗೂ 146 ಜನರಿಗೆ 90.29 ಲಕ್ಷ ಬಿಡಿಪಿ ಸಾಲ ವಿತರಿಸಲಾಗಿದೆ ಎಂದು ಆರ್ಥಿಕ ಪ್ರಗತಿ ವಿವರ ನೀಡಿದರು. ಸಂಘದ ಸಾರ್ವತ್ರಿಕ ಬೆಳವಣಿಗೆಗೆ ರೈತರು ಮತ್ತು ಸದಸ್ಯರ ಸಹಕಾರ ಹೀಗೆಯೇ ಮುಂದುವರಿಯಬೇಕು ಎಂದು ಅವರು ಕೋರಿದರು.

ಸಭೆಯಲ್ಲಿ ಉಪಾಧ್ಯಕ್ಷೆ ಗಾದಿಗನೂರು ಹಂಪಮ್ಮ, ನಿರ್ದೇಶಕರಾದ ಕೆ. ತಿಪ್ಪೇರುದ್ರಪ್ಪ, ಸಿ.ಕೆ. ಸೋಮಶೇಖರ, ಜಿ. ಕಡೆಮನೆ ನಾಗರಾಜ, ಕೊರವರ ಹುಲುಗಪ್ಪ, ಈ. ಅನ್ನಪೂರ್ಣ, ಜಿ. ಗಣೇಶಗೌಡ, ಎಸ್.ಎಸ್. ಮಲ್ಲಿಕಾರ್ಜುನ, ಪಿ. ನೀಲಕಂಠಪ್ಪ, ನಾಯಕರ ತಿಪ್ಪೇಸ್ವಾಮಿ, ಸಣಾಪುರ ಪಾರ್ವತಿ, ಮುಖಂಡರಾದ ಅಳ್ಳಳ್ಳಿ ವಿರೇಶ, ಜಿ. ಲಿಂಗನಗೌಡ, ಜಿ. ಮಲ್ಲಿಗೌಡ, ನಾಯಕರ ಯಂಕೋಬ, ಅಮರೇಗೌಡ ಹಾಗೂ ಸಂಘದ ಸಿಬ್ಬಂದಿ, ರೈತರು ಉಪಸ್ಥಿತರಿದ್ದರು.

ಹಟ್ಟಿ ಚಿನ್ನದ ಗಣಿ ಕಾರ್ಮಿಕರ ಬೇಡಿಕೆ ಈಡೇರಿಸಲು ಆಗ್ರಹ

ನೈಜ್ಯ ದೆಸೆ ನ್ಯೂಸ್

ಅಂಗಸಗೂರು: ಹಟ್ಟಿ ಚಿನ್ನದ ಗಣಿ ಕಂಪನಿ ಕಾರ್ಮಿಕರ ವಿವಿಧ ಬೇಡಿಕೆಗಳನ್ನು ಕೂಡಲೇ ಈಡೇರಿಸಬೇಕು ಎಂದು ಸಿಐಟಿಯು, ಕರ್ನಾಟಕ ಪ್ರಾಂತ ರೈತ ಸಂಘ, ಭಾರತ ಜನವಾದಿ ಮಹಿಳಾ ಸಂಘಟನೆ, ಭಾರತ ಪ್ರಜಾಸತ್ತಾತ್ಮಕ ಯುವಜನ ಸಂಘಟನೆ ಸೇರಿದಂತೆ ಸಂಘಟನೆಗಳ ತಾಲೂಕು ಸಮಿತಿಯ ಮುಖಂಡರು ಆಗ್ರಹಿಸಿ ಸಹಾಯಕ ಆಯುಕ್ತರ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು .

ಹಟ್ಟಿ ಚಿನ್ನದ ಗಣಿ ಸಿಬ್ಬಂದಿ ಹಾಗೂ ಕಾರ್ಮಿಕ ಸಂಘದ ಬೇಡಿಕೆಗಳನ್ನು ಈಡೇರಿಸುವಂತೆ ಕಳೆದ ಮೇ 25ರಿಂದ ಜೂನ್ 25ರವರೆಗೆ ಹಂತ ಹಂತವಾಗಿ ಧರಣಿ, ಸತ್ಯಾಗ್ರಹ ಹಾಗೂ ಪ್ರತಿಭಟನೆ ನಡೆಸಲಾಗಿತ್ತು ಎಂದು ತಿಳಿಸಿದ್ದಾರೆ. ಬಳಿಕ ಆರ್‌ಎಲ್‌ಸಿ ಕಾರ್ಮಿಕ ಆಯುಕ್ತರ ಮಧ್ಯಸ್ಥಿಕೆಯಲ್ಲಿ ನಡೆದ ಸಭೆಯಲ್ಲಿ ಹಲವು ಬೇಡಿಕೆಗಳ ಕುರಿತು ಚರ್ಚೆ ನಡೆಸಲಾಗಿತ್ತು.



ಆದರೆ ಇದುವರೆಗೂ ಬೇಡಿಕೆಗಳು ಈಡೇರದ ಹಿನ್ನೆಲೆಯಲ್ಲಿ ಸರ್ಕಾರ ಹಾಗೂ ಆಡಳಿತ ಮಂಡಳಿ ಕೂಡಲೇ ಕ್ರಮ ಕೈಗೊಳ್ಳಬೇಕು, ಹೊಸ ವೇತನ ಒಪ್ಪಂದದ ಪರಿಶೀಲನೆಗಾಗಿ ಮಾತುಕತೆಗೆ ಕೂಡಲೇ ಕರೆಯಬೇಕು. ಉತ್ಪಾದನಾ ಪ್ರೋತ್ಸಾಹಧನದ ಎಲ್‌ಐಎಂ ಬೋನಸ್ ಕೂಡಲೇ ನೀಡಬೇಕು. ಖಾಲಿ ಇರುವ 1473 ಮಾನವ ಶಕ್ತಿ ಕೊರತೆಯನ್ನು ಭರ್ತಿ ಮಾಡಬೇಕು. ಗಣಿಯಲ್ಲಿ ಗುತ್ತಿಗೆ ಪದ್ಧತಿ ಟೆಂಡರ್ ರದ್ದುಗೊಳಿಸಬೇಕು ಎಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ತಾಲ್ಲೂಕು ಅಧ್ಯಕ್ಷ ನಿಂಗಪ್ಪ ವೀರಾಪುರ, ಫಕ್ರುದ್ದೀನ್ ಮುಲ್ಲಾ, ವೆಂಕಟೇಶ್ ಗೋರ್ಕಲ್, ಅಲ್ಲಭಕ್ಷ ದೇವಾಪುರ, ಪಾಂಚಲಯ್ಯ, ರಜಿಯಾ ಬೇಗಂ, ಸಿದ್ದಮ್ಮ, ಸರಸ್ವತಿ, ನಜೀರ್ ಮಾಚನೂರು, ದಾವೂದ್, ಬಸಮ್ಮ, ಎಂ.ಡಿ ರಫಿ,ಸೇರಿದಂತೆ ಇದ್ದರು.

ಕನಕಗಿರಿಯ ಕನಕರಾಯ ದೇವರ ಆಶೀರ್ವಾದವೇ ನಮ್ಮ ಸೇವೆಗೆ ಸ್ಫೂರ್ತಿ -ಡಾ.ಚನ್ನಬಸವ ಸ್ವಾಮಿ ಹಿರೇಮಠ

ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಕೊಪ್ಪಳ ಜಿಲ್ಲೆಯ ಕನಕಗಿರಿ ತಾಲೂಕಿನ ಬೆನಕನಾಳ ಗ್ರಾಮದ ಗಂಗಮ್ಮ ಶರಣಪ್ಪ ವಂಕಲಕುಂಟಿ ಈ ದಂಪತಿಗಳ ಮೊಮ್ಮಗಳಾದ ದೀಪಾ ಬಸವರಾಜ ವಕೀಲರು ಈ ಆದರ್ಶ ದಂಪತಿಗಳ ಪ್ರೀತಿಯ ಮಗಳಾದ ಹಾನ್ವಿಕಾ ಇವರ ಪ್ರಥಮ ವರ್ಷದ ಜನ್ಮದಿನ ಸಮಾರಂಭ ಕಾರ್ಯಕ್ರಮವನ್ನು ವಂಕಲಕುಂಟಿ ಅಪಾರ ಕುಟುಂಬ ವರ್ಗದಿಂದ ಸಿಂಧನೂರು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ)ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಮಹಾಪ್ರಸಾದ ಸೇವೆ ಹಣ್ಣು ಹಂಪಲುಗಳನ್ನು ವಿತರಿಸುವ ಮೂಲಕ ಆಶ್ರಯದಾತರುಗಳಿಗೆ " ನಿಮ್ಮೊಂದಿಗೆ ನಾವಿದ್ದೇವೆ " ಆತ್ಮೀಯತೆಯ ಮಮತೆಯ ಪ್ರೀತಿಯನ್ನು ಧಾರೆಯೆರೆಯುವ ಮೂಲಕ ಅರ್ಥಪೂರ್ಣವಾಗಿ ನೆರವೇರತು.



ಈ ಕಾರ್ಯಕ್ರಮದಲ್ಲಿ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಮಾತನಾಡಿ ಕನಕಗಿರಿಯ ಕನಕರಾಯ ದೇವರ ಆಶೀರ್ವಾದವೇ ನಮ್ಮ ಸೇವೆಗೆ ಸ್ಫೂರ್ತಿ ಕನಕಗಿರಿ ತಾಲೂಕಿನ ಬೆನಕನಾಳ ಕುಟುಂಬ ಕಾರುಣ್ಯ ಆಶ್ರಮದಲ್ಲಿರುವ ಎಲ್ಲಾ ಹಿರಿಯರುಗಳು ದೇವರ ಸ್ವರೂಪಿಗಳು ಅವರ ಸೇವೆ ಮಾಡುವುದೇ ನಮ್ಮೆಲ್ಲರ ಪುಣ್ಯ ಇಂತಹ ಪುಣ್ಯ ಕಾರ್ಯ ಮಾಡುತ್ತಿರುವ ಕಾರುಣ್ಯ ಆಶ್ರಮಕ್ಕೆ ನಮ್ಮ ವಂಕಲಕುಂಟಿ ಕುಟುಂಬ ಹಾಗೂ ಬೆನಕನಾಳ ಮತ್ತು ಕನಕಗಿರಿ ತಾಲೂಕಿನ ಸಮಸ್ತ ಜನತೆಯ ಸಹಾಯ ಸಹಕಾರವಿರುತ್ತದೆ.

ಎನ್ನುವ ಧೈರ್ಯದ ನುಡಿಗಳನ್ನು ಆಡುವ ಮೂಲಕ ನಮ್ಮ ಆತ್ಮೀಯರಾದ ಹಾನ್ವಿಕಾ ಅವರ ಪಿತೋಶ್ರೀಗಳಾದ ಬಸವರಾಜ ವಕೀಲರು ಕಾರುಣ್ಯ ಆಶ್ರಮದ ಕರುಣೆಯ ಕಾರುಣ್ಯ ಮೂರ್ತಿಗಳಾಗಿದ್ದಾರೆ. ಇಂತಹವರ ಸಹಾಯ ಸಹಕಾರವೇ ಕಾರುಣ್ಯ ಆಶ್ರಮದ ಅಂಧ-ಅನಾಥರ ಬಾಳಿಗೆ ಬೆಳಕಾಗಿದೆ. ಇಂದಿನ ಬೆನಕನಾಳ ಕುಟುಂಬದ ಸೇವೆಯನ್ನು ನಾವೆಲ್ಲರೂ ಸಂತೋಷದಿಂದ ಸ್ವೀಕಾರ ಮಾಡಿ ಹಾನ್ವಿಕಾ ಅವರ ವಿದ್ಯಾಭ್ಯಾಸ ಜೀವನ ನಮ್ಮ ಭಾರತೀಯ ಸಂಸ್ಕೃತಿ ಸಂಸ್ಕಾರವನ್ನು ಉಳಿಸಿ ಬೆಳೆಸಲು ಕಾರಣವಾಗಲಿ ಮತ್ತು ಈ ಕುಟುಂಬಕ್ಕೆ ಸಕಲ ದೇವಾನುದೇವತೆಗಳು ಸಕಲೇಶ್ವರಿಯ ಸಿರಿ ಸಂಪತ್ತು ಆಯುಸ್ಸು ಆಯುರಾರೋಗ್ಯ ಸುಖ ಶಾಂತಿ ನೆಮ್ಮದಿಯನ್ನು ಕರುಣಿಸಲಿ ಎನ್ನುವ ವಿಶೇಷ ಪ್ರಾರ್ಥನೆಯೊಂದಿಗೆ ನಮ್ಮ ಹಾನ್ವಿಕಾ ಅವರಿಗೆ ಜನ್ಮದಿನದ ಶುಭಾಶಯಗಳು ಕೋರಿ ಹರಸಿ ಹಾರೈಸಿ ಆಶೀರ್ವದಿಸಲಾಗಿದೆ ಎಂದು ಮಾತನಾಡಿ ಬೆನಕನಾಳ ಗ್ರಾಮದ ವಂಕಲಕುಂಟಿ ಕುಟುಂಬಕ್ಕೆ ಕರುಣೆಯ ಕಾರುಣ್ಯ ಕುಟುಂಬದಿಂದ ಧನ್ಯವಾದಗಳನ್ನು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಬೆನಕನಾಳದ ವಂಕಲಕುಂಟಿ ಕುಟುಂಬದ ಗಂಗಮ್ಮ. ಶರಣಪ್ಪ. ದೀಪಾ.ಬಸವರಾಜ ವಕೀಲರು. ಹಾನ್ವಿಕಾ. ವೀಣಾ. ಶಿವಾನಂದ. ವಿಜಯಲಕ್ಷ್ಮಿ. ವಿಶ್ವನಾಥ. ವಿದ್ಯಾ. ಗದಿಗೆಪ್ಪ. ಶ್ರೇಯಸ್. ಆದ್ಯಾಶ್ರೀ. ಹಾಗೂ ಆಶ್ರಮದ ಸದಸ್ಯರಾದ ಸುಜಾತ ಹಿರೇಮಠ ಸಿಬ್ಬಂದಿಗಳಾದ ಸಿದ್ದಯ್ಯ ಸ್ವಾಮಿ.ಮರಿಯಪ್ಪ. ಜ್ಯೋತಿ. ಮಹಾಂತೇಶ ದೋಟಿಹಾಳ. ಶರಣು ಸ್ವಾಮಿ.ಬಸವ ಸ್ವಾಮಿ. ಹಾಗೂ ಬೆನಕನಾಳದ ವಂಕಲಕುಂಟಿ ಕುಟುಂಬದ ಸದಸ್ಯರುಗಳು ಉಪಸ್ಥಿತರಿದ್ದರು

ಸಾಹಿತ್ಯ ಸಿಂಚನ

ನಾಳೆ ನನ್ನದಾಗಲಿ

ನಿನ್ನೆಯ ನೋವು ಮರೆತುಹೋಗಲಿ,
ಇಂದಿನ ಕಣ್ಣೀರು ಒಣಗಿಹೋಗಲಿ,
ಹೊಸ ಕನಸುಗಳ ದಾರಿಯಲ್ಲಿ,
ನನ್ನ ಹೆಜ್ಜೆಗಳು ಸಾಗಿಹೋಗಲಿ.

ಕಳೆದುಹೋದ ಕ್ಷಣಗಳ ನೋವು,
ಮನದಾಳದಲ್ಲಿ ನೆನಪಾಗಿರಲಿ,
ಬರುವ ದಿನಗಳ ಭರವಸೆಯಲಿ,
ನನ್ನ ಬದುಕು ಅರಳಿಹೋಗಲಿ.

ಕತ್ತಲೆಯ ದಾರಿಯ ಕೊನೆಯಲಿ,
ಬೆಳಕಿನ ಕಿರಣ ಮೂಡಿಬರಲಿ,
ಸೋಲಿನ ನೆರಳು ದೂರ ಸರಿದು,
ಗೆಲುವಿನ ನಗು ನನ್ನದಾಗಲಿ.

ಕನಸು ಕಂಡ ಕಣ್ಣುಗಳಲಿ,
ಹೊಸ ಭರವಸೆ ಚಿಗುರೊಡೆಯಲಿ,
ನನ್ನ ಶ್ರಮದ ಪ್ರತಿಯೊಂದು ಹನಿಯೂ,
ಯಶಸ್ಸಿನ ಹೂವಾಗಿ ಅರಳಲಿ.

ನಿನ್ನೆಗಿಂತ ಇಂದು ಉತ್ತಮವಾಗಿ,
ಇಂದಿಗಿಂತ ನಾಳೆ ಸುಂದರವಾಗಿ,
ನನ್ನ ಹೃದಯದ ಒಂದೇ ಪ್ರಾರ್ಥನೆ?
ನಾಳೆ ನನ್ನದಾಗಲಿ, ಬದುಕು ಬೆಳಕಾಗಲಿ!

ಬರ ತಾಲೂಕು ಘೋಷಣೆ ಎಳನೀರು ಕುಡಿಸುವ ಮೂಲಕ ಬಸವರಾಜ ಗಾಣಿಗೇರ ಉಪವಾಸ ಸತ್ಯಾಗ್ರಹ ಅಂತ್ಯ

ನೈಜ್ಯ ದೆಸೆ ನ್ಯೂಸ್

ಕುಷ್ಟಗಿ: ಕುಷ್ಟಗಿ ತಾಲೂಕು ಬರಪೀಡಿತ ತಾಲೂಕುಗಳ ಪಟ್ಟಿಯಲ್ಲಿ ಸೇರ್ಪಡೆಯಾಗದ ಹಿನ್ನೆಲೆಯಲ್ಲಿ ರೈತ ಕುಲದ ಪರವಾಗಿ ಆಗ್ರಹಿಸಿ ಸತತ ಮೂರು ದಿನಗಳ ಕಾಲ ಉಪವಾಸ ಸತ್ಯಾಗ್ರಹ ನಡೆಸಿದ ಹೋರಾಟಗಾರ ಬಸವರಾಜ ಗಾಣಿಗೇರ ಅವರ ಉಪವಾಸ ಸತ್ಯಾಗ್ರಹವನ್ನು ಸರ್ಕಾರ ಕುಷ್ಟಗಿ ತಾಲೂಕನ್ನು ಬರಪೀಡಿತ ತಾಲೂಕು ಎಂದು ಘೋಷಿಸಿದ ಬಳಿಕ ಅಂತ್ಯಗೊಳಿಸಲಾಯಿತು.



ಬರ ತಾಲೂಕು ಘೋಷಣೆಯಾದ ಹಿನ್ನೆಲೆಯಲ್ಲಿ ಬಸನಗೌಡ ಪಾಟೀಲ ಅವರ ನಿವಾಸದಲ್ಲಿ ಬಸವರಾಜ ಗಾಣಿಗೇರ ಅವರಿಗೆ ಎಳನೀರು ಕುಡಿಸುವ ಮೂಲಕ ಉಪವಾಸ ಸತ್ಯಾಗ್ರಹವನ್ನು ಮೊಟಕುಗೊಳಿಸಲಾಯಿತು. ಈ ಸಂದರ್ಭದಲ್ಲಿ ವಿಠ್ಠಲ ಶೆಟ್ಟರ, ರಮೇಶ ಮೇಲಿನಮನಿ, ತಿರುಮಲರಾವ್ ದೇಸಾಯಿ, ನಾಗರಾಜ ನಂದಿಹಾಳ, ಕಿರಣ ಜ್ಯೋತಿ ಸಂಪತರಾಜ ಸೇರಿದಂತೆ ರೈತರು ಹಾಗೂ ಹೋರಾಟಗಾರರು ಉಪಸ್ಥಿತರಿದ್ದರು

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

ಕಾಂಗ್ರೆಸ್ ದುರಾಡಳಿತಕ್ಕೆ ಜನ ಬೇಸತ್ತಿದ್ದಾರೆ: ಕಂಪ್ಲಿಯಲ್ಲಿ ರಾಜುನಾಯಕ ವಾಗ್ದಾಳಿ"

ನೈಜ್ಯ ದೆಸೆ ನ್ಯೂಸ್



ಬಳ್ಳಾರಿ / ಕಂಪ್ಲಿ: ರಾಜ್ಯದ ಕಾಂಗ್ರೆಸ್ ಸರ್ಕಾರದ ದುರಾಡಳಿತದಿಂದ ರೈತರು, ಬಡ ಜನರು ರೋಸಿ ಹೋಗಿದ್ದು, ಬರುವ ದಿನದಲ್ಲಿ ತಕ್ಕಪಾಠ ಕಲಿಸಲು ಮುಂದಾಗಿದ್ದಾರೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯ ಕಾರ್ಯಾಧ್ಯಕ್ಷ ರಾಜುನಾಯಕ ಗುಡುಗಿದರು.

ಪಟ್ಟಣದ ಅತಿಥಿ ಗೃಹದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಕಂಪ್ಲಿ ತಾಲೂಕು ಸೇರಿದಂತೆ ರಾಜ್ಯದ ಬಹುತೇಕ ತಾಲೂಕುಗಳಲ್ಲಿ ಬರ ಆವರಿಸಿದ್ದು, ಇದರಿಂದ ರೈತರು ಸಂಕಷ್ಟ ಎದು-ರಿಸುವಂತಾಗಿದೆ. ರಾಜ್ಯ ಸರ್ಕಾರ ನೆಪಕ್ಕೆ ಮಾತ್ರ ಬರ ಪೀಡಿತ ತಾಲೂಕುಗಳೆಂದು ಘೋಷಿಸಿದೆ ಹೊರತು ಪರಿಹಾರ ನೀಡಲು ಮುಂದಾಗಿಲ್ಲ. ಆದ್ದರಿಂದ ಕೂಡಲೇ ರಾಜ್ಯ ಸರ್ಕಾರ ಬರ ಪೀಡಿತ ತಾಲೂಕುಗಳ ಪ್ರತಿ ರೈತರ ಎಕರೆಗೆ ಸುಮಾರು 30 ಸಾವಿರ ರೂ.ಗಳ ಪರಿಹಾರ ನೀಡಬೇಕು. ಮತ್ತು ರೈತರ ಸಂಪೂರ್ಣ ಸಾಲ ಮನ್ನಾ ಮಾಡಬೇಕು. ಬರೀ ರೈತರ ಜಪ ಮಾಡುವುದಲ್ಲ. ಬದಲಾಗಿ ಅವರ ಕಷ್ಟದಲ್ಲಿ ಭಾಗಿಯಾಗಿ ಪರಿಹಾರ ನೀಡಿದಾಗ ಮಾತ್ರ ರೈತರ ಬದುಕು ಉತ್ತಮವಾಗಿರುತ್ತದೆ ಎಂದರು. ಕಂಪ್ಲಿಯಲ್ಲಿ ನಿರ್ಮಿಸಿದ ಮಿನಿವಿಧಾನಸೌಧವು ಕಳಪೆಯಿಂದ ಕೂಡಿದೆ. ಬಸಿ ನೀರು ಬರುವ ಜಾಗದಲ್ಲಿ ಮಿನಿ ವಿಧಾನಸೌಧ ಮಾಡಲಾಗಿದೆ.

ಇದರಲ್ಲಿ ಗುಟಮಟ್ಟ ಇಲ್ಲದಮನತಾಗಿದ್ದು, ಬಹಳ ವರ್ಷ ಬಾಳಿಕೆ ಬರುವುದಿಲ್ಲ. ಈಗಾಗಲೇ ವರ್ಷಾನು ವರ್ಷಗಳೇ ಕಳೆಯುತ್ತಿದ್ದರೂ, ಸ್ಥಳೀಯ ಶಾಸಕರು ಉದ್ಘಾಟನೆ ಮಾಡದೇ, ಪಾಳು ಬೀಳುವಂತೆ ಮಾಡಿದ್ದಾರೆ. ಇಲ್ಲಿನ ಅತಿಥಿ ಗೃಹದ ಬಳಿಯಲ್ಲಿ ಅತಿಥಿ ಗೃಹದ ನೂತನ ಕಟ್ಟಡ ನಿರ್ಮಿಸಿ, ಕಾಮಗಾರಿ ಮುಗಿದು, ವರ್ಷಗಳೇ ಕಳೆದರೂ, ಉದ್ಘಾಟನೆ ಭಾಗ್ಯ ಇಲ್ಲದಂತಾಗಿದೆ. ಮತ್ತು ಬಹು ವರ್ಷದ ಬೇಡಿಕೆಯಾಗಿರುವ ಕಂಪ್ಲಿ ಹೊಸ ಸೇತುವೆಗೆ ಕಾಂಗ್ರೆಸ್ ಸರ್ಕಾರ ಮನಸ್ಸು ಮಾಡುತ್ತಿಲ್ಲ. ಡಿಪಿಆರ್ ಹಂತ ಸೇ-ರಿದಂತೆ ಇನ್ನಿತರ ಕಾರಣಗಳ ನೆಪವೊಡ್ಡಿ, ಜನರಿಗೆ ಮಂಕುಬೂದಿ ಹಚ್ಚತ್ತಿದ್ದಾರೆ.

ಪ್ರತಿ ಬಾರಿ ಪ್ರವಾಹದಿಂದಾಗಿ ಸೇತುವೆ ಮುಳುಗಿ, ಸಂಚಾರಕ್ಕೆ ಅಡಚಣೆಯಾಗುತ್ತಿದೆ. ಈ ಬಾರಿ ಬರಗಾರ ಎದುರಾಗಿದ್ದು, ನೆಪ ಹೇಳುವುದನ್ನು ಬಿಟ್ಟು ಸ್ಥಳೀಯ ಶಾಸಕರು ಮತ್ತು ರಾಜ್ಯ ಸರ್ಕಾರ ಈ ಭಾಗದ ರೈತರ, ಜನರ, ವಾಹನ ಸವಾರರ ಸಂಚಾರದ ಹಿತದೃಷ್ಟಿಯಿಂದ ನೂತನ ಸೇತುವೆಗೆ ಅಡಿಗಲ್ಲು ಹಾಕಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಬಳ್ಳಾರಿ ನಗರ ಘಟಕ ಅಧ್ಯಕ್ಷ ಹೊನ್ನೂರಸ್ವಾಮಿ, ಜಿಲ್ಲಾ ಎಸ್ಸಿ ಘಟಕದ ಅಧ್ಯಕ್ಷ ವಸಂತಕುಮಾರ, ಕಂಪ್ಲಿ ವಿಧಾನಸಭಾ ಕ್ಷೇತ್ರ ಅಧ್ಯಕ್ಷ ಹೆಚ್.ಮೇಘರಾಜ್, ಪ್ರಧಾನ ಕಾರ್ಯದರ್ಶಿ ಜಗದೀಶ ಪೂಜಾರ, ನಗರ ಘಟಕ ಅಧ್ಯಕ್ಷ ಇರ್ಫಾನ್ ಗುತ್ತಿ, ಮುಖಂಡರಾದ ಮಂಜುನಾಥ ಕುಕನೂರು, ಹಳ್ಳಿಗುಡಿ ಹನುಮಂತಪ್ಪ, ಬೇವೂರು ಈರಣ್ಣ, ವಿರುಪಾಕ್ಷಿ, ನಿಂಗಪ್ಪ, ವಿರೇಶ, ರಾಜೇಶ, ಸಂಗೇಶ, ಕೊಂಡಯ್ಯ ಸೇ-ರಿದಂತೆ ಜೆಡಿಎಸ್ ಕಾರ್ಯಕರ್ತರು ಇದ್ದರು.

ಕಂಪ್ಲಿಯಲ್ಲಿ ಸಡಗರದ ಪೌರ ಕಾರ್ಮಿಕರ ದಿನಾಚರಣೆ: ಶ್ರಮಿಕರಿಗೆ ಸನ್ಮಾನ, ಸುರಕ್ಷಾ ಕಿಟ್ ವಿತರಣೆ

ಪೌರ ಕಾರ್ಮಿಕರಿಗೆ ಸೌಲತ್ತುಗಳನ್ನು ಒದಗಿಸಲು ಬದ್ಧ : ಬಿ.ಮಲ್ಲಿಕಾರ್ಜುನ

ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ: ಪೌರ ಕಾರ್ಮಿಕರು ದಿನನಿತ್ಯದ ದುಡಿಮೆಯಲ್ಲಿ ಅಲ್ಪಸ್ವಲ್ಪ ಹಣವನ್ನು ಕೂಡಿಟ್ಟು, ಮಕ್ಕಳ ಶೈಕ್ಷಣಿಕ ಮಟ್ಟದ ಅಭಿವೃದ್ಧಿಗೆ ಬಳಸಿ, ಭವಿಷ್ಯ ರೂಪಿಸಬೇಕು. ಮತ್ತು ದುಶ್ಚಟಗಳಿಂದ ದೂರವಿರುವ ಮೂಲಕ ನಗರದ ಸ್ವಚ್ಚತೆಗೆ ಮುಂದಾಗಬೇಕು ಎಂದು ಮುಖ್ಯಾಧಿಕಾರಿ ಬಿ.ಮಲ್ಲಿಕಾರ್ಜುನ ಹೇಳಿದರು.

ಪಟ್ಟಣ ಪುರಸಭೆ ಕಛೇರಿ ಆವರಣದಲ್ಲಿ ಬುಧವಾರ ನಡೆದ ಪೌರ ಕಾರ್ಮಿಕರ ದಿನಾಚರಣೆ ಸಮಾರಂಭ ಉದ್ಘಾಟಿಸಿ ಮಾತನಾಡಿ, ನಗರದಲ್ಲಿ ದಿನನಿತ್ಯದಲ್ಲಿ ಕೈಗೊಂಡಿರುವ ಸ್ವಚ್ಚತೆ ಕಾರ್ಯ ಮೆಚ್ಚುವಂತಾಗಿದ್ದು, ಇದರ ಯಶಸ್ಸಿಗೆ ಪೌರ ಕಾರ್ಮಿಕರ ಶ್ರಮ ಮಹತ್ವದ್ದಾಗಿದೆ. ಪೌರ ಕಾರ್ಮಿಕರು ವರ್ಷಪೂರ್ತಿ ನಗರವನ್ನು ಸ್ವಚ್ಛವಾಗಿಡಲು ಆರೋಗ್ಯವನ್ನು ಲೆಕ್ಕಿಸದೆ ಶ್ರಮಿಸುತ್ತಿದ್ದಾರೆ. ಪೌರ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಪರಿಶೀಲನೆ ನಡೆಸಲಾಗಿದೆ. ಸಮಸ್ಯೆಗಳು ಪರಿಹರಿಸಲು ತ್ವರಿತವಾಗಿ ಸ್ಪಂದಿಸಲಾಗುವುದು. ಸರ್ಕಾರದಿಂದ ಪೌರ ಕಾರ್ಮಿಕರಿಗೆ ನೀಡುವ ಸೌಲತ್ತುಗಳನ್ನು ಒದಗಿಸಲು ಪುರಸಭೆ ಬದ್ಧವಾಗಿದೆ. ಪೌರ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಲು ಪುರಸಭೆ ಶ್ರಮಿಸಲಿದೆ. ಪೌರ ಕಾರ್ಮಿಕರು ನಗರದ ಸೌಂದರ್ಯೀಕರಣ-ಕ್ಕೆ ಸಹಕಾರ ನೀಡಬೇಕು. ಪೌರ ಕಾರ್ಮಿಕರು ಸರಿಯಾದ ದಾಖಲೆಗಳನ್ನು ನೀಡಿದ್ದಲ್ಲಿ ಅತಿ ಶೀಘ್ರದಲ್ಲೇ ನಿವೇಶನ ನೀಡಲಾಗುವುದು. ವಿಶ್ರಾಂತಿ ಗೃಹ ಕಟ್ಟಡ ಕಾಮಗಾರಿ ಈಗಾಗಲೇ ಮುಗಿದಿದ್ದು, ಅತಿ ಶೀಘ್ರದಲ್ಲೇ ಸ್ಥಳೀಯ ಶಾಸಕರ ಮೂಲಕ ಉದ್ಘಾಟಿಸಿ, ಪೌರ ಕಾರ್ಮಿಕರ ಬಳಕೆಗೆ ಅನುವು ಮಾಡಿಕೊಡಲಾಗುವುದು ಎಂದು ತಿಳಿಸಿದರು. ಉತ್ತಮ ಸೇವೆ ಸಲ್ಲಿಸಿದ ಪೌರ ಕಾರ್ಮಿಕರನ್ನು ಸನ್ಮಾನಿಸಿ ಗೌರವಿಸಲಾಯಿತು. ವೇದಿಕೆ ಸಮಾರಂಭದ ಮುಂಚಿತವಾಗಿ ನಗರದುದ್ದಕ್ಕೂ ಪೌರ ಕಾರ್ಮಿಕರ ದಿನಾಚರಣೆ ಆಚರಿಸುವ ಜೊತೆಗೆ ಧ್ವನಿ ವರ್ಧಕದ ಹಾಡುಗಳಿಗೆ ಪೌರ ಕಾರ್ಮಿಕ ಹೆಜ್ಜೆ ಹಾಕಿದರು. ನಂತರ ಜೆಸಿಐ ಅಲುಮ್ನಿ ಕ್ಲಬ್ ಕಂಪ್ಲಿ ಹಾಗೂ ಪುರಸಭೆ ಸಂಯುಕ್ತ ಆಶ್ರಯದಲ್ಲಿ ಪೌರ ಕಾರ್ಮಿಕರಿಗೆ ಕಿಟ್ ವಿತರಿಸಲಾಯಿತು.



ಜೆಸಿಐ ಅಲುಮ್ನಿ ಕ್ಲಬ್ ಕಂಪ್ಲಿ ರೀಜನ್ ಅಧ್ಯಕ್ಷ ಡಿ.ಮೌನೇಶ್ ಮಾತನಾಡಿ, ಪೌರ ಕಾರ್ಮಿಕರ ಆರೋಗ್ಯ ಕಾಪಾಡಿಕೊಂಡು, ನಗರದ ಸ್ವಚ್ಚತೆಗೆ ಮುಂದಾಗಬೇಕು. ನಗರವನ್ನು ಸ್ವಚ್ಛವಾಗಿಡಲು ಕಾರ್ಮಿಕರ ಪಾತ್ರ ದೊಡ್ಡದಿದೆ.

ಅವರಿಗೆ ಗೌರವ ನೀಡುವ ಮೂಲಕ ಸಹಕರಿಸಬೇಕಾಗಿದೆ ಎಂದರು. ಈ ಸಂದರ್ಭದಲ್ಲಿ ಜೆಸಿಐ ಕಂಪ್ಲಿ ಸೋನಾ ಘಟಕ ಅಧ್ಯಕ್ಷ ಡಾ.ಭರತ್ ಪದ್ಮಸಾಲಿ, ಆರೋಗ್ಯ ಹಿರಿಯ ನಿರೀಕ್ಷಕ ಪ್ರಕಾಶಬಾಬು, ಮುಖಂಡರಾದ ಕೆ.ಎಂ.ಹೇಮಯ್ಯಸ್ವಾಮಿ, ರುದ್ರಪ್ಪ ಆಚಾರ್, ಶಾಂತಿಲಾಲ್, ಪೌರ ಕಾರ್ಮಿಕರಾದ ಹೆಚ್.ರವಿ, ಹನುಮಂತ, ಓಬಳೇಶ, ಸುಂಕಪ್ಪ, ರಾಮಪ್ಪ, ಸುಜಾತ, ನಾಗಮ್ಮ, ಲಕ್ಷ್ಮಿದೇವಿ, ಅನಂತಮ್ಮ ಸೇರಿದಂತೆ ಸಿಬ್ಬಂದಿಗಳು, ಪೌರ ಕಾರ್ಮಿಕರು ಇದ್ದರು.

ಸಿಂಧನೂರು ತಾಲೂಕು ಆರೋಗ್ಯಾಧಿಕಾರಿಗಳ ಕಛೇರಿ ವತಿಯಿಂದ "ವಿಶ್ವ ರೇಬಿಸ್ ದಿನಾಚರಣೆ" ಜಾಗೃತಿ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

ಸಿಂಧನೂರು: ತಾಲೂಕು ಆರೋಗ್ಯಾಧಿಕಾ-ರಿಗಳ ಕಛೇರಿ ಸಿಂಧನೂರು ವತಿಯಿಂದ "ವಿಶ್ವ ರೇಬಿಸ್ ದಿನಾಚರಣೆ" ಜಾಗೃತಿ ಕಾರ್ಯಕ್ರಮ ಸಿಂಧನೂರಿನ ತಾಲೂಕಿನ 3ಮೈಲಿ ಕ್ಯಾಂಪ್ ನಲ್ಲಿ " ವಿಶ್ವ ರೇಬಿಸ್ ದಿನಾಚರಣೆ" ಯನ್ನು ಆಚರಿಸಲಾಯಿತು.

ಶ್ರೀಮತಿ ಗೀತಾ ಹಿರೇಮಠ್ BHEO, ತಾಲೂಕು ಅರೋಗ್ಯಾಧಿಕಾ-ರಿಗಳ ಕಾರ್ಯಾಲಯ ಸಿಂಧನೂರು ಇವರು ಮಾತನಾಡಿ ಸಾರ್ವಜನಿಕರಲ್ಲಿ ರೇಬಿಸ್ ರೋಗದ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ತಾಲೂಕನ್ನು ರೇಬಿಸ್ ಮುಕ್ತಗೊಳಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿ-ತ್ತು. ಸೆಪ್ಟೆಂಬರ್ 22 ರಿಂದ ಸೆಪ್ಟೆಂಬರ್ 28ರವರೆಗೆ ಸಪ್ತಾಹ ಕಾರ್ಯಕ್ರಮದ ಅಂಗವಾಗಿ

ಜಾಗೃತಿ ಜಾಥಾ: 3ಮೈಲಿ ಕ್ಯಾಂಪನ ಪ್ರಮುಖ ರಸ್ತೆಗಳಲ್ಲಿ ರೇಬಿಸ್ ತಡೆಗಟ್ಟುವಿಕೆ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸುವ ಬ್ಯಾನರ್ ಮತ್ತು ಕರಪತ್ರಗಳ ಮೂಲಕ ಜಾಗೃತಿ ಜಾಥಾ ನಡೆಸಲಾಯಿತು.

ನಾಯಿ ಕಡಿತ ಮತ್ತು ಪ್ರಥಮ ಚಿಕಿತ್ಸೆ: ಹುಚ್ಚು ನಾಯಿ ಅಥವಾ ಯಾವುದೇ ಪ್ರಾಣಿ ಕಡಿದ ತಕ್ಷಣ ಗಾಯವನ್ನು ಕನಿಷ್ಠ 15 ನಿಮಿಷಗಳ ಕಾಲ ಹ-ರಿಯುವ ನೀರು ಮತ್ತು ಸಾಬೂನಿನಿಂದ ಚೆನ್ನಾಗಿ ತೊಳೆಯಬೇಕು. ಗಾಯಕ್ಕೆ ಖಾರ, ಸುಣ್ಣ ಅಥವಾ ಯಾವುದೇ ಗಿಡಮೂಲಿಕೆಗಳನ್ನು ಹಚ್ಚಬಾರದು ಎಂದು ಸಾರ್ವಜನಿಕರಿಗೆ ತಿಳಿಸಲಾಯಿತು.

ಲಸಿಕೆಯ ಪ್ರಾಮುಖ್ಯತೆ: ನಾಯಿ ಕಡಿತಕ್ಕೆ ಒಳಗಾದವರು ನಿರ್ಲಕ್ಷ್ಯ ವಹಿಸದೇ ತಕ್ಷಣವೇ ಸಮೀಪದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಉಚಿತವಾಗಿ ಲಭ್ಯವಿರುವ 'ರೇಬಿಸ್ ವಿರೋಧಿ ಲಸಿಕೆ' (ಂಖಗಿ) ಯನ್ನು ನಿಗದಿತ ದಿನಗಳಲ್ಲಿ ಪಡೆದುಕೊಳ್ಳಬೇಕು ಎಂದು ವೈದ್ಯರು ಸಲಹೆ ನೀಡಿದರು.

ಸಾಕುಪ್ರಾಣಿಗಳಿಗೆ ಲಸಿಕೆ: ಸಾಕು ನಾಯಿಗಳಿಗೆ ಹಾಗೂ ಬೆಕ್ಕುಗಳಿಗೆ ನಿಯಮಿತವಾಗಿ ರೇಬಿಸ್ ನಿರೋಧಕ ಲಸಿಕೆಯನ್ನು ಹಾಕಿಸುವುದು ಮಾಲೀಕರ ಜವಾಬ್ದಾ-ರಿಯಾಗಿದೆ ಎಂದು ಪಶುವೈದ್ಯಕೀಯ ಇಲಾಖೆಯ ಸಹಯೋಗದೊಂದಿಗೆ ಅರಿವು ಮೂಡಿಸಲಾಯಿತು.

ಸಂದೇಶ: "ರೇಬಿಸ್ ಮಾರಣಾಂತಿ-ಕ ಕಾಯಿಲೆಯಾಗಿದ್ದರೂ, ಸರಿಯಾದ ಜಾಗೃತಿ ಮತ್ತು ಸಮಯಕ್ಕೆ ಸರಿಯಾಗಿ ಲಸಿಕೆ ಪಡೆಯುವುದರಿಂದ ಇದನ್ನು 100% ತಡೆಯಬಹುದು. ಸಿಂಧನೂರು ತಾಲೂಕಿನ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ರೇಬಿಸ್ ಲಸಿಕೆ ಉಚಿತವಾಗಿ ಲಭ್ಯವಿದ್ದು, ಸಾರ್ವಜನಿಕರು ಇದರ ಸೌಲಭ್ಯವನ್ನು ಪಡೆದುಕೊಳ್ಳಬೇಕು." ಈ ಕಾರ್ಯಕ್ರಮದಲ್ಲಿ ಸಾವಿತ್ರಿ ಕಊಅಔ,-ಅಂದಮ್ಮ ಆಶಾ ಕಾರ್ಯಕರ್ತೆಯರು,ಪ-ರಿದಾ ಬೇಗಂ ಅಂಗನವಾಡಿ ಸಹಾಯಕಿ ಪಶುಸಂಗೋಪನೆ ಇಲಾಖೆಯ ಸಿಬ್ಬಂದಿ ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.



ಕಾರುಣ್ಯಾಶ್ರಮದಲ್ಲಿ ಪೌರ ಕಾರ್ಮಿಕ ದಿನಾಚರಣೆ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

ಸಿಂಧನೂರು – ಲಾಜರ್ ಸಿರಿಲ್ ನಿರ್ಮಲಾ ಹಾಗೂ ಇರ್ಷಾದ್ ಅತ್ತಾರ್ ಗೆಳೆಯರ ಬಳಗ ಸಿಂಧನೂರು ವತಿಯಿಂದ ಪೌರಕಾರ್ಮಿಕರ ದಿನಾಚರಣೆಯನ್ನು ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀ ಮತ ಸೇವಾ ಟ್ರಸ್ಟ್ (ರಿ) ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಗೌರವಾನ್ವಿತ ಮುಖ್ಯಮಂತ್ರಿಗಳಿಂದ ಸನ್ಮಾನಿತಗೊಳ್ಳುವ ಸಿಂಧನೂ-ರಿನ ನಗರಸಭೆ ಪೌರಕಾರ್ಮಿಕರಾದ ಶ್ರೀ ಕಾಂತ್ ಅವರನ್ನು ಅಭಿನಂದಿಸುವ ಮೂಲಕ ಆಶ್ರಮದಲ್ಲಿ ಮಹಾಪ್ರಸಾದ ಸೇವೆ ಹಣ್ಣು ಹಂಪಲುಗಳನ್ನು ವಿತ-ರಿಸುವ ಮೂಲಕ ಅರ್ಥಪೂರ್ಣವಾಗಿ ಪೌರಕಾರ್ಮಿಕ ದಿನಾಚರಣೆಯನ್ನು ನೆರವೇರಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಸಿಂಧನೂರು ನಗರಸಭೆಯ ಪೌರಕಾರ್ಮಿಕರಾದ ಶ್ರೀಕಾಂತ್ ಅವರನ್ನು ಹಾಗೂ ಸಮುದಾಯ ಸಂಚಾಲಕರಾದ ಸವಿತಾ ಕುಮಾರಿ ಇವರುಗಳನ್ನು ಲಾಜರ್ ಸಿರಿಲ್ ನಿರ್ಮಲಾ ಇವರುಗಳ ಕುಟುಂಬದಿಂದ ಹಾಗೂ ಕಾರುಣ್ಯ ಆಶ್ರಮದಿಂದ ಅಭಿನಂದಿಸಲಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ಸನ್ ರೈಸ್ ಗ್ರೂಪ್ ಆಫ್ ಇನ್ಸ್ಟಿಟ್ಯೂಟ್ ನ ಕಾಲೇಜಿನ ಪ್ರಾಂಶುಪಾಲರಾದ ಲಾಜರ್ ಸಿರಿಲ್ ಮಾತನಾಡಿ ಇಂದು ಪೌರಕಾರ್ಮಿಕರಾದ ನನ್ನ ಆತ್ಮೀಯ ಸ್ನೇಹಿತನಾದ ಶ್ರೀಕಾಂತ್ ಅವರು ಬೆಳ್ಗಂ ಬೆಳಿಗ್ಗೆ ಮಾಡುತ್ತಿರುವ ಹಲವಾರು ಕಾರ್ಯಗಳನ್ನು ನೋಡಿದಾಗ ನನ್ನ ಸ್ನೇಹಿತನ ಈ ಕಾರ್ಯಕ್ಕೆ ನಾನೇ ಹೆಮ್ಮೆಪಟ್ಟು ಮಾಡುತ್ತೇನೆ. ನಗರವನ್ನು ಉತ್ತಮ ಆರೋಗ್ಯ ಸಹಿತ ಸುಂದರ ನಗರವನ್ನಾಗಿ ಮಾಡುವುದರಲ್ಲಿ



ಪೌರ ಕಾರ್ಮಿಕರ ಪಾತ್ರ ವಿಶೇಷವಾಗಿದೆ.

ನಗರ ಸಭೆಯ ಪ್ರತಿಯೊಬ್ಬ ಪೌರಕಾರ್ಮಿಕರು ಕೂಡ ಸಾರ್ವಜನಿಕರ ಆರೋಗ್ಯ ಸ್ವಚ್ಚತೆಯ ಬಗ್ಗೆ ತಮ್ಮನ್ನು ತಾವು ಅರ್ಪಿಸಿಕೊಂಡು ಸೇವೆ ಮಾಡುತ್ತಿದ್ದಾರೆ. ಮತ್ತು ವಿಶೇಷವಾಗಿ ನಮ್ಮ ಸಿಂಧನೂರಿನ ನಮ್ಮ ಆತ್ಮೀಯ ಸ್ನೇಹಿತರಾದ ಶ್ರೀಕಾಂತ್ ಅವರು ಮಾನ್ಯ ಮುಖ್ಯಮಂತ್ರಿಗಳ ಮೂಲಕ ಅಭಿನಂದಿಸಲ್ಪಡುತ್ತಿರುವದು ನಮಗಷ್ಟೇ ಅಲ್ಲದೆ ಸಿಂಧನೂರಿನ ಘನತೆ ಗೌರವವನ್ನು ಹೆಚ್ಚಿಸಿದೆ. ಇಂತಹ ವಿಶೇಷ ಪೌರಕಾರ್ಮಿಕ ದಿನಾಚರಣೆಯನ್ನು ಕಾರುಣ್ಯ ಎನ್ನುವ ಕರುಣೆಯ ಕುಟುಂಬದಲ್ಲಿ ಆಚರಿಸುತ್ತಿರುವುದು ನಮ್ಮೆಲ್ಲ-ರಿಗೆ ಆತ್ಮ ತೃಪ್ತಿ ತಂದಿದೆ ಸಮಸ್ತ ನಾಡಿನ ಪೌರಕಾರ್ಮಿಕರಿಗೆ ಹಾರ್ದಿಕ ಶುಭಾಶಯಗಳು ಸಲ್ಲಿಸುವ ಮೂಲಕ ತಮ್ಮೆಲ್ಲರಿಗೆ ಧನ್ಯವಾದಗಳು ಕೂಡ ನಮ್ಮ ಸನ್ ರೈಸ್ ಸಂಸ್ಥೆಯ ವತಿಯಿಂದ ಅರ್ಪಿಸುತ್ತಿದ್ದೇವೆ ಎಂದು ಮಾತನಾಡಿ ಸಮಸ್ತ ನಾಡಿನ ಪೌರಕಾರ್ಮಿಕರಿಗೆ ಶುಭಕೋರಿದರು.

ಈ ಕಾರ್ಯಕ್ರಮದಲ್ಲಿ ನಗರಸಭೆಯ ಸಮುದಾಯ ಸಂಚಾಲಕ ಅಧಿಕಾರಿಗಳಾದ ಸವಿತಾ ಕುಮಾರಿ. ಹಾಗೂ ಅಕ್ಷತಾ. ಶ್ರೀಕಾಂತ್. ನಿರ್ಮಲಾ.



ಇರ್ಶಾದ್ ಅತ್ತಾರ್ ಕಾರ್ಯದರ್ಶಿಗಳು ಸನ್ ರೈಸ್ ಗ್ರೂಪ್ ಆಫ್ ಇನ್ಸ್ಟಿಟ್ಯೂಟ್. ಇಸಾಕ್. ರವಿಕುಮಾರ. ದುರ್ಗೇಶ ಬಾಲಿ ಡಿ.ಎಸ್.ಎಸ್. ಮುಖಂಡರು. ಆರ್ಚಿ ಆಟೋ ಡ್ರೈವರ್. ಹಂಪಯ್ಯ.ಪರಶುರಾಮ ಬಾಲಿ. ಪಂಪನಗೌಡ ಭೀಮನ ಗೌಡ್ರು ಹರೇಟನೂರು. ವೀರಭದ್ರಗೌಡ ಗಿಣಿವಾರ ಹಾಗೂ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಸದಸ್ಯರಾದ ಸುಜಾತ ಹಿರೇಮಠ ಹಾಗೂ ಸಿಬ್ಬಂದಿಗಳಾದ ಸಿದ್ದಯ್ಯ ಸ್ವಾಮಿ.ಮ-ರಿಯಪ್ಪ.ಜ್ಯೋತಿ. ಮಹಾಂತೇಶ ದೋಟಿಹಾಳ ಶರಣು ಸ್ವಾಮಿ.ಬಸವ ಸ್ವಾಮಿ. ಹಾಗೂ ಸನ್ ರೈಸ್ ಕಾಲೇಜಿನ ಸಿಬ್ಬಂದಿಗಳು ಮತ್ತು ಹಲವಾರು ಗಣ್ಯರು ಆಶ್ರಯದಾತರುಗಳು ಉಪಸ್ಥಿತರಿದ್ದರು.

ನೇಮಕಾತಿ ಪ್ರಕಟಣೆ

DHFWS ಕೊಪ್ಪಳ ನೇಮಕಾತಿ 2026 ನರರೋಗ ತಜ್ಞ (Neurologist) ಮತ್ತು ವೈದ್ಯಾಧಿಕಾರಿ (Medical Officer) ಹುದ್ದೆಗಳಿಗಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಸೆಪ್ಟೆಂಬರ್ 21, 2026

DHFWS ಕೊಪ್ಪಳ ನೇಮಕಾತಿ 2026: 5 ನರರೋಗ ತಜ್ಞ ಮತ್ತು ವೈದ್ಯಾಧಿಕಾರಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ (DHFWS), ಕೊಪ್ಪಳವು ತನ್ನ ಸೆಪ್ಟೆಂಬರ್ 2026ರ ಅಧಿಕೃತ ಅಧಿಸೂಚನೆಯ ಮೂಲಕ ನರರೋಗ ತಜ್ಞ ಮತ್ತು ವೈದ್ಯಾಧಿಕಾರಿ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಹಾಗೂ ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕರ್ನಾಟಕ ಸರ್ಕಾರದ ಅಡಿಯಲ್ಲಿ ಕೊಪ್ಪಳದಲ್ಲಿ ಉದ್ಯೋಗವನ್ನು ಬಯಸುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 25-ಸೆಪ್ಟೆಂಬರ್-2026 ರೊಳಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: koppal.nic.in

ಪರಿಸರ ನೈರ್ಮಲ್ಯ ಮತ್ತು ಸ್ವಚ್ಛತೆ ಪ್ರತಿಯೊಬ್ಬರ ಹೊಣೆ: ಶ್ರೀಮತಿ ಗೀತಾ ಹಿರೇಮಠ್ ಕರೆ

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ರಾಯಚೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು, ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ ಸಿಂಧನೂರು,

ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಗಾಂಧಿನಗರ ಇವರ ಸಂಯುಕ್ತಾಶ್ರಯದಲ್ಲಿ ಅರಳಹಳ್ಳಿ ಉಪಕೇಂದ್ರಕ್ಕೆ ಒಳಪಡುವ 3ಮೈಲ್ ಕ್ಯಾಂಪ ಗ್ರಾಮದ 1ನೇ ಅಂಗನವಾಡಿ ಕೇಂದ್ರದಲ್ಲಿ ಒರವಲಯ ಮಕ್ಕಳ ಸಾರ್ವತ್ರಿಕಾ ಲಸಿಕಾ ಸತ್ರದಲ್ಲಿ "ಸ್ವಚ್ಛತಾ ಹಿ ಸೇವಾ ಅಭಿಯಾನದ " ಕಾರ್ಯಕ್ರಮದ ಕುರಿತು ಶ್ರೀಮತಿ ಗೀತಾ ಹಿರೇಮಠ್ ತಾಲೂಕ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು ಇವರು ಮಾತನಾಡಿ ದೇಶದಲ್ಲಿ ಸ್ವಚ್ಛತಾ ಈ ಸೇವಾ 2026 ಅಭಿಯಾನವು ಸೆಪ್ಟೆಂಬರ್ 17 ರಿಂದ ಅಕ್ಟೋಬರ್



2,2026 ರವರೆಗೆ ಸಕ್ರೀಯವಾಗಿ ನಡೆಯುತ್ತದೆ ಮಹಾತ್ಮ ಗಾಂಧೀಜಿಯವರ ಜಯಂತಿಯ ಅಂಗವಾಗಿ ಜಾಗೃತಿ ಮತ್ತು ಶ್ರಮಧಾನದ ಕಾರ್ಯಕ್ರಮವನ್ನು ಆಯೋಜಿಸುವುದು ಘೋಷಣೆ = "ಸ್ವಚ್ಛತಾ ಸಹಭಾಗ್; ಸ್ವಚ್ಛ ಭಾರತ್ ವೀಕ್ಷಿತ್ ಭಾರತ್" (ಸ್ವಚ್ಛತೆಯಲ್ಲಿ ಪಾಲುದಾರಿಕೆ ; ಸ್ವಚ್ಛ ಭಾರತ, ವಿಕಸಿತ ಭಾರತ) ದೇಶದ ವಿವಿಧ ಸರ್ಕಾರಿ ಕಚೇರಿಗಳು ಶಾಲಾ ಕಾಲೇಜುಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಕಸ ಮುಕ್ತಗೊಳಿಸುವ ವಿಶೇಷ ಶ್ರಮದಾನಗಳು ಕಾರ್ಯಕ್ರಮ ಮಾಡುವುದು,

ಕಸ ನಿರ್ವಹಣೆಯ ಬಗ್ಗೆ ಸಾರ್ವಜನಿಕರಲ್ಲಿ ಮತ್ತು ಯುವಕರಲ್ಲಿ ಜಾಗೃತಿ ಮೂಡಿಸುವುದು ಸಂಘಟನೆಗಳ ಮೂಲಕ ಜಾಗೃತಿ ಮೂಡಿಸುವುದು ಸಾರ್ವಜನಿಕರು ತಮ್ಮ ಮನೆಯ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವುದು ಎಲ್ಲಂದರಲ್ಲಿ ಕಸಗಳನ್ನ ಬಿಸಾಕದೆ ನಿಗದಿಪಡಿಸಿದ ಸ್ಥಳಗಳಲ್ಲಿ ಘನ ತ್ಯಾಜ್ಯ ವಸ್ತುಗಳು ಕಸದ ಬುಟ್ಟಿಗಳಲ್ಲಿ ಕಸ ಹಾಕುವುದು ಈ ಕಾರ್ಯಕ್ರಮದ ಉದ್ದೇಶ ಸಾರ್ವಜನಿಕರಲ್ಲಿ ನೈರ್ಮಲ್ಯದ ಬಗ್ಗೆ ಅರಿವು ಮೂಡಿಸುವುದು ಮತ್ತು ವರ್ತನೆಯಲ್ಲಿ ಬದಲಾವಣೆಯ ತರುವುದು ಪ್ಲಾಸ್ಟಿಕ್ ಮುಕ್ತ ವಾತಾವರಣ ನಿರ್ಮಾಣ ಹಾಗೂ ಹಸಿ ಮತ್ತು ಒಣ ಕಸವನ್ನು ಬೇರ್ಪಡಿಸುವುದು ಸಾರ್ವಜನಿಕ ಸ್ಥಳಗಳು ಶಾಲೆಗಳು ಮತ್ತು ಕಚೇರಿಗಳಲ್ಲಿ ಸ್ವಚ್ಛತಾ ಕಾರ್ಯಗಳನ್ನು ನಡೆಸುವುದು ನಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿರವಂತೆ ನೋಡಿಕೊಳ್ಳಬೇಕು. ಸ್ವಚ್ಛತಾ ಕಾರ್ಮಿಕ-ರಿಗೆ ಗೌರವ ನೀಡುವುದು ಉದ್ದೇಶವಾಗಿದೆ ಮನೆಯಿಂದ ಒಣ ಮತ್ತು ಹಸಿ ಕಸವನ್ನು ಪ್ರತ್ಯೇಕವಾಗಿ ಸಂಗ್ರಹಿಸುವುದು ಮತ್ತು ಗ್ರಾಮೀಣ ಭಾಗದಲ್ಲಿ ಕಂಪೋಸ್ಟಿಂಗ (ಗೊಬ್ಬರ ತಯಾ-ರಿಕೆ) ಘಟಕಗಳಿಗೆ ಉತ್ತೇಜನ ನೀಡುವುದು ಮುಖ್ಯವಾಗಿದೆ ಈ ಸಂದರ್ಭದಲ್ಲಿ ಸಾವಿತ್ರಿ ಕಊಅಔ, ಅಂದಮ್ಮ ಆಶಾ ಕಾರ್ಯಕರ್ತೆ, ಫರಿದಾ ಬೇಗಂ ಅಂಗನವಾಡಿ ಸಹಾಯಕಿ, ಹಾಗೂ ಗರ್ಭಿಣಿ ತಾಯಂದಿರು, ಸಾರ್ವಜನಿಕರು ಉಪಸ್ಥಿತರಿದ್ದರು.

ಕುಷ್ಟಗಿ ತಾಲೂಕು ಬರಪೀಡಿತ ಘೋಷಣೆ ಜಿಲ್ಲಾಧಿಕಾರಿ ಸುರೇಶ ಇಟ್ನಾಳ್‌ಗೆ ಸನ್ಮಾನ

❑ ನೈಜ್ಯ ದೆಸೆ ನ್ಯೂಸ್

ಕುಷ್ಟಗಿ: ಸರ್ಕಾರವು ಕುಷ್ಟಗಿ ತಾಲೂಕನ್ನು ಬರಪೀಡಿತ ತಾಲೂಕು ಎಂದು ಘೋಷಣೆ ಮಾಡಿರುವ ಹಿನ್ನೆಲೆಯಲ್ಲಿ, ಕೊಪ್ಪಳ ಜಿಲ್ಲಾಧಿಕಾರಿ ಡಾ. ಸುರೇಶ ಇಟ್ನಾಳ್ ಅವರನ್ನು ಶ್ರೀ ಪರಮಪೂಜ್ಯ ನಿಡಶೇಸಿ ಅಭಿನವ ಕರಿಬಸವಾಚಾರ್ಯ ಸ್ವಾಮೀಜಿಗಳ ಸಮ್ಮುಖದಲ್ಲಿ ಸನ್ಮಾನಿಸಿ ಗೌರವಿಸಲಾಯಿತು ಕುಷ್ಟಗಿ ತಾಲೂಕನ್ನು ಬರಪೀಡಿತ ತಾಲೂಕು ಎಂದು



ಘೋಷಿಸುವಂತೆ ರೈತರು ಹಾಗೂ ವಿವಿಧ ಸಂಘಟನೆಗಳು ನಡೆಸಿದ ನಿರಂತರ ಹೋರಾಟಕ್ಕೆ ಸ್ಪಂದಿಸಿ ಸರ್ಕಾರದಿಂದ ಬರ ಘೋಷಣೆ ಮಾಡಿಸಿರುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಸುರೇಶ ಇಟ್ನಾಳ್ ಅವರಿಗೆ ಅಭಿನಂದನೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಹೋರಾಟಗಾರರಾದ ಬಸವರಾಜ ಗಾಣಿಗೇರ, ಮಹೇಶ್ವರಸ್ವಾಮಿ ಹಿರೇಮಠ, ಸಿದ್ಧಾರೂಢ ಶ್ರೀಗಳು, ಬಿ.ಎಸ್. ಪಾಟೀಲ, ಬಸವರಾಜ ಹೊರಪೇಟಿ, ಮಹಾಂತೇಶ ಬಂಡೇರ, ಸಂಗಮೇಶ ಕಂದಗಲ್ ಸೇರಿದಂತೆ ರೈತ ಮುಖಂಡರು ಹಾಗೂ ಹೋರಾಟಗಾರರು ಉಪಸ್ಥಿತರಿದ್ದರು.

ಎಸ್‌ಸಿ-ಎಸ್‌ಟಿ ಸಮುದಾಯದ ಪ್ರಗತಿ ಕುರಿತು ಅರ್ಥಪೂರ್ಣ ಚರ್ಚೆ ಅಗತ್ಯ: ಸಂಸದ ಜಿ. ಕುಮಾರ್ ನಾಯಕ್

❑ ನೈಜ್ಯ ದೆಸೆ ನ್ಯೂಸ್

ಮೈಸೂರು: ಮೈಸೂರು ವಿಶ್ವವಿದ್ಯಾನಿಲಯದ ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ, ಮಾನಸಗಂಗೋತ್ರಿ ವತಿಯಿಂದ ವಿಶ್ವಜ್ಞಾನಿ ಸಭಾಂಗಣದಲ್ಲಿ ಆಯೋಜಿಸಿದ್ದ "ಮೈಸೂರು?ಪೂನಾ ಒಪ್ಪಂದದ ಅಂಗವಾಗಿ ಎಂಟು ದಶಕಗಳ ಸ್ವಾತಂತ್ರ್ಯ ಭಾರತದಲ್ಲಿ ಕರ್ನಾಟಕದ ಪರಿಶಿಷ್ಟ ಜಾತಿ?ಪರಿಶಿಷ್ಟ ಪಂಗಡಗಳ ಪ್ರಗತಿಯ ಪರಿಶೀಲನೆ" ಕುರಿತ ರಾಜ್ಯಮಟ್ಟದ ಕಾರ್ಯಾಗಾರದಲ್ಲಿ ರಾಯಚೂರು ಸಂಸದ ಜಿ. ಕುಮಾರ್ ನಾಯಕ್ ಪಾಲ್ಗೊಂಡರು.

ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಜಾತಿ ಸಮುದಾಯದ ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಹಿತ್ಯಿಕ ವಿಚಾರಗಳ ಕುರಿತು ಮುಕ್ತವಾಗಿ ಚರ್ಚಿಸುವುದು, ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಗಣ್ಯರ ಅನುಭವಗಳನ್ನು ಹಂಚಿಕೊಳ್ಳುವುದು ಹಾಗೂ ಸಮುದಾಯದ ಮುಂದಿನ ದಿಕ್ಕಿನ ಕುರಿತು ವಿಚಾರ ವಿನಿಮಯ ನಡೆಸುವುದು ಇಂತಹ ವೇದಿಕೆಗಳ



ಪ್ರಮುಖ ಉದ್ದೇಶವಾಗಿದೆ ಎಂದು ಹೇಳಿದರು.

ಮೈಸೂರು ಜಿಲ್ಲೆಯಲ್ಲಿ ದಲಿತ ಸಾಹಿತ್ಯ ಕ್ಷೇತ್ರದಲ್ಲಿ ಸಕ್ರಿಯವಾಗಿ ಬರಹ ಹಾಗೂ ಸಂಶೋಧನೆಯಲ್ಲಿ ತೊಡಗಿರುವ ಹಲವಾರು ವಿದ್ವಾಂಸರು ಹಾಗೂ ಗಣ್ಯರು ಇದ್ದಾರೆ. ಅಲ್ಲದೆ, ಪರಿಶಿಷ್ಟ ಜಾತಿ ಸಮುದಾಯವನ್ನು ಪ್ರತಿನಿಧಿಸುವ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸಿರುವ ನಿವೃತ್ತ ಐಎಎಸ್ ಅಧಿಕಾರಿಗಳು, ಆದಾಯ ತೆರಿಗೆ ಇಲಾಖೆಯ ನಿವೃತ್ತ ಅಧಿಕಾರಿಗಳು, ರಾಜ-ಕೀಯ ನಾಯಕರು ಸೇರಿದಂತೆ ವಿವಿಧ ಕ್ಷೇತ್ರಗಳ ಹಿರಿಯರು ಇದ್ದಾರೆ ಎಂದು ಅವರು ತಿಳಿಸಿದರು.

ಇಂತಹ ವೇದಿಕೆಗಳ ಮೂಲಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯಗಳ ಪ್ರಮುಖ ಸಮಸ್ಯೆಗಳು, ಎದುರಿಸುತ್ತಿರುವ ಸವಾಲುಗಳು ಹಾಗೂ ಅಭಿವೃದ್ಧಿಗೆ ಸಂಬಂಧಿಸಿದ ವಿಚಾರಗಳ ಕುರಿತು ಮುಕ್ತವಾಗಿ ಚರ್ಚೆ ನಡೆಸುವ ಅಗತ್ಯವಿದೆ. ಈ ಮೂಲಕ ಸಮುದಾಯದ ಶೈಕ್ಷಣಿಕ, ಸಾಮಾಜಿ-ಕ ಹಾಗೂ ಆರ್ಥಿಕ ಪ್ರಗತಿಗೆ ಅಗತ್ಯವಾದ ಮಾರ್ಗೋಪಾಯಗಳನ್ನು ರೂಪಿಸಬಹುದು ಎಂದು ಸಂಸದರು ಅಭಿಪ್ರಾಯಪಟ್ಟರು.

ಕಾರ್ಯಾಗಾರದಲ್ಲಿ ಸಾಮಾಜಿಕ ನ್ಯಾಯ, ಸಮಾನತೆ ಹಾಗೂ ಅವಕಾಶಗಳ ಸಮಾನ ಹಂಚಿಕೆಯ ಆಶಯಗಳನ್ನು ಮುಂದುವರಿಸುವ ನಿಟ್ಟಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಶೈಕ್ಷಣಿಕ, ಸಾಮಾಜಿಕ ಹಾಗೂ ಆರ್ಥಿಕ ಪ್ರಗತಿ ಸೇರಿದಂತೆ ವಿವಿಧ ವಿಚಾರಗಳ ಕುರಿತು ಅರ್ಥಪೂರ್ಣ ಚರ್ಚೆಗಳು ನಡೆದವು.

ಪತ್ರಕರ್ತರ ರಾಜ್ಯಮಟ್ಟದ ಸಮ್ಮೇಳನಕ್ಕೆ ಕಲಾವಿದರಿಂದ ಲೋಗೊಗಳಿಗೆ ಆಹ್ವಾನ - ಜಿಲ್ಲಾಧ್ಯಕ್ಷ ಆರ್.ಗುರುನಾಥ್

❑ ನೈಜ್ಯ ದೆಸೆ ನ್ಯೂಸ್

ರಾಯಚೂರು : ಕರ್ನಾಟಕ ಕಾರ್ಯಕರ್ತ ಪತ್ರಕರ್ತರ ಸಂಘದಿಂದ ರಾಯಚೂರಿನಲ್ಲಿ ನಡೆಯಲಿರುವ 41ನೇ ಪತ್ರಕರ್ತರ ರಾಜ್ಯಮಟ್ಟದ ಸಮ್ಮೇಳನಕ್ಕೆ ಚಿತ್ರ ಕಲಾವಿದರಿಂದ ಸೂಕ್ತ ಲೋಗೊ (ಲಾಂಛನ) ಗಳನ್ನು ಆಹ್ವಾನಿಸಲಾಗಿದೆ. ರಾಯಚೂರು ಜಿಲ್ಲೆಯ ಇತಿಹಾಸ, ಪರಂಪರೆ, ಸಂಪ್ರದಾಯಗಳನ್ನು ಒಳಗೊಂಡ ಲೋಗೋವನ್ನು ರಚಿಸಿ ಕಳುಹಿಸಲು ಕೋರಲಾಗಿದೆ. ಚಿತ್ರ ಕಲಾವಿದರು ಲೋಗೊಗಳನ್ನು ಕೈಯಿಂದಲೇ ರಚಿಸಿರಬೇಕು. ಎ ಐ ಚಿತ್ರಗಳಿಗೆ ಅವಕಾಶವಿಲ್ಲ.



ನೀವು ಕಳಿಸುವ ಲೋಗೊಗಳು ಉತ್ತಮ ರೆಜುಲೇಷನ್ ಹೊಂದಿರಬೇಕು. ಲಾಂಛನ ಆಯ್ಕೆಯಾದಲ್ಲಿ ಆ ಕಲಾವಿದರನ್ನು ಸಮ್ಮೇಳನದಲ್ಲಿ ಪ್ರಮಾಣ ಪತ್ರ ನೀಡಿ ಸನ್ಮಾನಿಸಲಾಗುವುದು. ಆಸಕ್ತ ಕಲಾವಿದರು ಅಕ್ಟೋಬರ್ 5ನೇ ತಾರೀಖಿನ ಒಳಗಾಗಿ ಅಧ್ಯಕ್ಷರು, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಜಿಲ್ಲಾ ಘಟಕ ರಾಯಚೂರು, ಪತ್ರಿಕಾ ಭವನ, ರಂಗಮಂದಿರದ ಹಿಂದುಗಡೆ, ರಾಯಚೂರು ಈ ವಿಳಾಸಕ್ಕೆ ಕಳಿಸಬೇಕು ಅಥವಾ 7892 011826, 9902921474 ಈ ಸಂಖ್ಯೆಗಳ ವಾಟ್ಸ್ ಅಪ್ ಗೆ ಕಳುಹಿಸುವಂತೆ ಸಂಘದ ಜಿಲ್ಲಾಧ್ಯಕ್ಷ ಆರ್.ಗುರುನಾಥ್, ಪ್ರಧಾನ ಕಾರ್ಯದರ್ಶಿ ಸಿದ್ದಯ್ಯ ಸ್ವಾಮಿ ಪ್ರಕಟಣೆಯಲ್ಲಿ ಕೋರಿದ್ದಾರೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

ದುಷ್ಟರ ಶಿಕ್ಷಕಿ, ಶಿಷ್ಟರ ರಕ್ಷಕಿ ಶಿವಕನ್ನಿಕಾ ದೇವಿ ಹಿರೇಬನ್ನಿಗೋಳದ ಇತಿಹಾಸ ಪ್ರಸಿದ್ಧ ಜಾತ್ರೆಗೆ ಕ್ಷಣಗಣನೆ

❑ ನೈಜ್ಯ ದೆಸೆ ನ್ಯೂಸ್

ಕುಷ್ಟಗಿ: ತಾಲೂಕಿನ ಹಿರೇಬನ್ನಿಗೋಳ ಗ್ರಾಮದ ಶತಮಾನಕ್ಕೂ ಹೆಚ್ಚು ಇತಿಹಾಸ ಹೊಂದಿರುವ ಶ್ರೀ ಶಿವಕನ್ನಿಕಾ ದೇವಿಯ ಜಾತ್ರೆ ಸೆ.25 ಮತ್ತು 26ರಂದು ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನಡೆಯಲಿದೆ.

ಭೂಮಿಯಿಂದ ತಾಯಿ ಉದ್ಭವಿಸಿದಳು ಎಂಬ ಪ್ರತೀತಿ ಗ್ರಾಮಸ್ಥರಲ್ಲಿದ್ದು, ಅಂದಿನಿಂದ ಇಂದಿನವರೆಗೂ ಪ್ರತಿವರ್ಷ ಶ್ರದ್ಧಾ-ಭಕ್ತಿಯಿಂದ ಜಾತ್ರೆಯನ್ನು ಆಚ-ರಿಸಿಕೊಂಡು ಬರಲಾಗುತ್ತಿದೆ. ತಾಲೂಕಿನ ಪ್ರಮುಖ ಜಾತ್ರೆಗಳಲ್ಲಿ ಒಂದಾಗಿರುವ ಈ ಜಾತ್ರೆಗೆ ಸುತ್ತಮುತ್ತಲಿನ ಗ್ರಾಮಗಳಿಂದಲೂ ಅಪಾರ ಸಂಖ್ಯೆಯಲ್ಲಿ ಭಕ್ತರು ಆಗಮಿಸುವ ನಿರೀಕ್ಷೆಯಿದೆ. 108 ದಂಪತಿಗಳಿಗೆ ಉಡಿ ತುಂಬುವ ಸೇವೆ ಜಾತ್ರೆಯ ಮುನ್ನಾದಿನ ರಾತ್ರಿ ಪರಮಪೂಜ್ಯ ಶ್ರೀ ಚನ್ನಬಸವ ಶಿವಾಚಾರ್ಯ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ 108 ದಂಪತಿಗಳಿಗೆ ಉಡಿ ತುಂಬುವ ಹಾಗೂ ಹೋಳಿಗೆ ಪ್ರಸಾದ ವಿತ-ರಿಸುವ ಧಾರ್ಮಿಕ ಸೇವೆ ನಡೆಯಲಿದೆ.



ಮಕ್ಕಳಾಗದ ದಂಪತಿಗಳು ಈ ಪ್ರಸಾದ ಸೇವೆಯಲ್ಲಿ ಪಾಲ್ಗೊಂಡ ಬಳಿಕ ಸಂತಾನ ಭಾಗ್ಯ ದೊರೆತಿದೆ ಎಂಬ ನಂಬಿಕೆ ಹಾಗೂ ಸ್ಥಳೀಯರ ಅನುಭವಗಳು ಇಲ್ಲಿವೆ ಎಂದು ಭಕ್ತರು ಹೇಳುತ್ತಾರೆ. ಭಾವಚಿತ್ರದ ಅದ್ದೂರಿ ಮೆರವಣಿಗೆ ಜಾತ್ರೆಯ ದಿನ ಶ್ರೀ ಶಿವಕನ್ನಿಕಾ ದೇವಿಯ ಭಾವಚಿತ್ರದ ಮೆರವಣಿಗೆಯನ್ನು ಪುರವಂತರು, ಡೊಳ್ಳು ವಾದ್ಯಗಳು ಹಾಗೂ ಭಜನಾ ಮಂಡಳಿಗಳೊಂದಿಗೆ ಗ್ರಾಮಸ್ಥರು ಅದ್ದೂ-ರಿಯಾಗಿ ನೆರವೇರಿಸುವುದು ವಾಡಿಕೆಯಾಗಿದೆ. ತಾಯಿಯ ಹೆಸರಿನಲ್ಲೇ ಭಕ್ತಿಯ ಪ್ರತೀಕ ದೇವಿಯ ಮೇಲಿನ ಅಪಾರ ಭಕ್ತಿಯ ಪ್ರತೀಕವಾಗಿ ಗ್ರಾಮದಲ್ಲಿ ಶಿವಪ್ಪ, ಶಿವರಾಜ, ಶಿವಮ್ಮ, ಶಿವಲೀಲಾ ಸೇರಿದಂತೆ ತಾಯಿಯ ಹೆಸರನ್ನು ಒಳಗೊಂಡಿರುವ ಅನೇಕ ಹೆಸರುಗಳು ಕಂಡುಬರುತ್ತವೆ. ಸುತ್ತಮುತ್ತಲಿನ ಗ್ರಾಮಗಳಲ್ಲಿಯೂ ದೇವಿಯ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

ಜಾನುವಾರುಗಳ ಆರೋಗ್ಯದ ಬಗ್ಗೆಯೂ ನಂಬಿಕೆ ಗ್ರಾಮದಲ್ಲಿ ಹೆಚ್ಚಿನವರು ರೈತಾಪಿ ಕುಟುಂಬಗಳಾಗಿದ್ದು, ಜಾನುವಾರುಗಳಿಗೆ ಅನಾರೋಗ್ಯ ಉಂಟಾದ ಸಂದರ್ಭದಲ್ಲಿ ದೇವಿಯ ಹೆಸರನ್ನು ಸ್ಮರಿಸಿದರೆ ಗುಣವಾಗುತ್ತದೆ ಎಂಬ ನಂಬಿಕೆ ಗ್ರಾಮಸ್ಥರಲ್ಲಿದೆ. ಎರಡು ದಿನ ಮಾಂಸಾಹಾರ ಸೇವನೆಗೆ ವಿರಾಮ ದೇವಿಯ ಮೇಲಿನ ಶ್ರದ್ಧೆ-ಭಕ್ತಿಯ ಹಿನ್ನೆಲೆಯಲ್ಲಿ ಜಾತ್ರೆಯ ಎರಡು ದಿನಗಳ ಕಾಲ ಗ್ರಾಮಸ್ಥರು ಮಾಂಸಾಹಾರ ಸೇವನೆ ಮಾಡದಿರುವುದು ಇಲ್ಲಿನ ವಿಶೇಷ ಆಚರಣೆಯಾಗಿದೆ. ದೇವಿಯ ಮೇಲಿನ ಭಕ್ತಿಯಿಂದ ಈ ಪರಂಪರೆಯನ್ನು ಗ್ರಾಮಸ್ಥರು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಎಲ್ಲ ಧರ್ಮದ ಭಕ್ತರಿಂದ ಆರಾಧನೆ ಹಿರೇಬನ್ನಿಗೋಳ ಮಾತ್ರವಲ್ಲದೆ ಸುತ್ತಮುತ್ತಲಿನ ವಿವಿಧ ಗ್ರಾಮಗಳ ಭಕ್ತರು ದೇವಿಯನ್ನು ಆರಾಧಿಸುತ್ತಾರೆ. ಹಿಂದೂ-ಮುಸ್ಲಿಂ ಸಮುದಾಯದ ಭಕ್ತರು ಕೂಡ ಧೀಡ್ ನಮಸ್ಕಾರ, ಜವಳ, ಅಭಿಷೇಕ ಹಾಗೂ ವಿಶೇಷ ಪೂಜೆ ಸೇ-ರಿದಂತೆ ವಿವಿಧ ಸೇವೆಗಳನ್ನು ಶ್ರದ್ಧಾ-ಭಕ್ತಿಯಿಂದ ಸಲ್ಲಿಸುತ್ತಿರುವುದು ಇಲ್ಲಿನ ವಿಶೇಷತೆಯಾಗಿದೆ. ಬಹಳ ವರ್ಷಗಳಿಂದ ಸೋಲೇಬಣ್ಣಿ ಬಡಿಗೇರ ಕುಟುಂಬದವರು ಶ್ರೀ ಶಿವಕನ್ನಿಕಾ ದೇವಿಯ ಪೂಜೆ ಹಾಗೂ ಧಾರ್ಮಿಕ ವಿಧಿವಿಧಾನಗಳನ್ನು ನಡೆಸಿಕೊಂಡು ಬರುತ್ತಿರುವುದು ವಿಶೇಷವಾಗಿದೆ. ಅಂದಪ್ಪ ಮಾಲಗಿತ್ತಿ ಹವ್ಯಾಸಿ ಬರಹಗಾರ, ಹಿರೇಬನ್ನಿಗೋಳ

ಜಲಧಾರೆ ಯೋಜನೆ ಅವೈಜ್ಞಾನಿಕ ಕಾಮಗಾರಿ ಆರೋಪ: ರಸ್ತೆ ಅಪಘಾತದಲ್ಲಿ ಇಬ್ಬರು ಸಾವು; ರಾಜ್ಯ ಹೆದ್ದಾರಿಯಲ್ಲಿ ಪ್ರತಿಭಟನೆ

ಮೃತದೇಹಗಳನ್ನು ಆಸ್ಪತ್ರೆಯಿಂದ ತೆಗೆದುಕೊಂಡು ಹೋಗದೆ ಪರಿಹಾರಕ್ಕೆ ಆಗ್ರಹ; ತಾಲೂಕು ಆಡಳಿತ ಜಲಧಾರೆ ಅಧಿಕಾರಿಗಳ ಭರವಸೆ ಬಳಿಕ ಪ್ರತಿಭಟನೆ ವಾಪಸ್

❑ ನೈಜ್ಯ ದೆಸೆ ನ್ಯೂಸ್

ಜಾಲಹಳ್ಳಿ: ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಜಾಲಹಳ್ಳಿ ಪಟ್ಟಣದ ಜೆ.ಜೆ. ಕಲ್ಯಾಣ ಮಂಟಪದ ಸಮೀಪದ ರಾಜ್ಯ ಹೆದ್ದಾ-ರಿಯಲ್ಲಿ ಬುಧವಾರ ರಾತ್ರಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಇಬ್ಬರು ಮೃತಪಟ್ಟಿದ್ದು, ಇಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಬುಲೆರೋ ವಾಹನ ಡಿಕ್ಕಿ ಹೊಡೆದ ಪರಿಣಾಮ ನಾಲ್ವರು ಅಪಘಾತಕ್ಕೀಡಾಗಿದ್ದು, ಹೊಸೂರು ಸಿದ್ದಾಪುರ ಗ್ರಾಮದ ನಿಂಗಯ್ಯ (18) ಹಾಗೂ ಜಾಲಹಳ್ಳಿ ಗೋಪಾಳಪುರದ ಹನುಮಯ್ಯ (48) ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗಾಯಗೊಂಡ ಇಬ್ಬರನ್ನು ಹೆಚ್ಚಿನ ಚಿಕಿತ್ಸೆಗಾಗಿ ರಾಯಚೂರಿನ ರಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಅವೈಜ್ಞಾನಿಕ ಕಾಮಗಾರಿಗೆ ಆಕ್ರೋಶ ಜಲಧಾರೆ ಯೋಜನೆ (ಎಎಬ) ಅಡಿಯಲ್ಲಿ ರಾಜ್ಯ ಹೆದ್ದಾರಿ ಪಕ್ಕದಲ್ಲಿ ನಡೆಯುತ್ತಿರುವ ಕಾಮಗಾರಿಯಲ್ಲಿ ಅಗತ್ಯ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದಿರುವುದೇ ಅಪಘಾತಕ್ಕೆ ಕಾರಣವಾಗಿದೆ ಎಂದು ಆರೋಪಿಸಿ ಮೃತರ ಸಂಬಂಧಿಕರು, ಸಾರ್ವಜನಿಕರು ಹಾಗೂ ವಿವಿಧ ಸಂಘಟನೆಗಳ ಮುಖಂಡರು ಗುರುವಾರ ರಾಜ್ಯ ಹೆದ್ದಾರಿ ಮೇಲೆ ಕುಳಿತು ಪ್ರತಿಭಟನೆ ನಡೆಸಿದರು. ಕಾಮಗಾರಿ ನಡೆಯುತ್ತಿರುವ ಸ್ಥಳದಲ್ಲಿ ಸೂಚನಾ ಫಲಕ, ಬ್ಯಾರಿಕೇಡ್ ಹಾಗೂ ಅಗತ್ಯ



ಸುರಕ್ಷತಾ ವ್ಯವಸ್ಥೆಗಳನ್ನು ಅಳವಡಿಸದೆ ರಸ್ತೆ ಬದಿಯಲ್ಲಿ ಗುಂಡಿಗಳನ್ನು ತೆರೆದಿರುವುದು ವಾಹನ ಸವಾರರಿಗೆ ಅಪಾಯಕಾರಿಯಾಗಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

"ರಾತ್ರಿ ವೇಳೆ ಕಾಮಗಾರಿ ಸ್ಥಳ ವಾಹನ ಸವಾರರಿಗೆ ಸ್ಪಷ್ಟವಾಗಿ ಕಾಣದಿರುವುದ-ರಿಂದ ಅಪಘಾತ ಸಂಭವಿಸಿದೆ. ಕಾಮಗಾರಿ ನಡೆಸುವಾಗ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳದ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು" ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಮೃತ ಕುಟುಂಬಗಳಿಗೆ ತಲಾ ?10 ಲಕ್ಷ ಪರಿಹಾರಕ್ಕೆ ಆಗ್ರಹ ಮೃತರ ಕುಟುಂಬಗಳಿಗೆ ತಲಾ ?10 ಲಕ್ಷ ಪರಿಹಾರ ನೀಡಬೇಕು ಹಾಗೂ ಕಾಮಗಾರಿಯಲ್ಲಿ ನಿರ್ಲಕ್ಷ್ಯ ವಹಿಸಿರುವವರ ವಿರುದ್ಧ ಪ್ರಕರಣ

ಅಧಿಕಾರಿಗಳ ಭರವಸೆ ಬಳಿಕ ಪ್ರತಿಭಟನೆ ವಾಪಸ್

ಸ್ಥಳಕ್ಕೆ ತಾಲೂಕು ಆಡಳಿತದ ಅಧಿಕಾ-ರಿಗಳು, ಜಲಧಾರೆ ಯೋಜನೆಯ ಅಧಿಕಾ-ರಿಗಳಾದ ಎ ಇ ಇ ಹೀರಾಲಾಲ್, ಬಸವರಾಜ್ ಹಾಗೂ ಪೊಲೀಸರು ಭೇಟಿ ನೀಡಿ ಪ್ರತಿಭಟನಾಕಾರರೊಂದಿಗೆ ಮಾತುಕತೆ ನಡೆಸಿದರು.

ದಾಖಲಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು. ಪ್ರತಿಭಟನೆಯ ಹಿನ್ನೆಲೆಯಲ್ಲಿ ಮೃತದೇಹಗಳನ್ನು ಆಸ್ಪತ್ರೆಯಿಂದ ತೆಗೆದುಕೊಂಡು ಹೋಗದೆ, ಸಂಬಂಧಿಕರು ಹಾಗೂ ಸಾರ್ವಜನಿಕರು ರಾಜ್ಯ ಹೆದ್ದಾರಿಯಲ್ಲಿ ಪ್ರತಿಭಟನೆ ನಡೆಸಿದರು. ಇದರಿಂದ ಕೆಲಕಾಲ ವಾಹನ ಸಂಚಾರಕ್ಕೆ ಅಡಚಣೆ ಉಂಟಾಯಿತು. ಪ್ರತಿಭಟನೆಯನ್ನು ಉದ್ದೇಶಿಸಿ ಪರಿಹಾರಕ್ಕಾಗಿ ನರಸಣ್ಣ ನಾಯಕ ಹಾಗೂ ವಕೀಲ ಬಸನಗೌಡ ದೇಸಾಯಿ ಮಾತನಾಡಿದರು. ಮೃತ ಕುಟುಂಬಗಳಿಗೆ ಪರಿಹಾರ ನೀಡುವ ಕು-ರಿತು ಹಾಗೂ ಕಾಮಗಾರಿ ಸ್ಥಳದಲ್ಲಿ ಅಗತ್ಯ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವ ಕುರಿತು ಅಧಿಕಾರಿಗಳು ಭರವಸೆ ನೀಡಿದ ಹಿನ್ನೆಲೆಯಲ್ಲಿ ಪ್ರತಿಭಟನೆಯನ್ನು ಹಿಂಪಡೆಯಲಾಯಿತು.

ಸ್ಥಳದಲ್ಲಿ ಡಿವೈಎಸ್ಪಿ ದತ್ತಾತ್ರೇಯ, ಸಿಪಿಐ ಪುಂಡಲಿಕ ಹೊಸ್ಕೇರಪ್ಪ, ಜಾಲಹಳ್ಳಿ ಪಿಎಸ್ಐ ವೈಶಾಲಿ ಜಳಕಿ ಸೇರಿದಂತೆ ಪೊಲೀಸ್ ಸಿಬ್ಬಂದಿ ಹಾಗೂ ಸಂಬಂಧಿಸಿದ ಅಧಿಕಾರಿಗಳು ಉಪಸ್ಥಿತರಿದ್ದರು. ಪ್ರತಿಭಟನೆಯಲ್ಲಿ ಶ್ರೀಮತಿ ಶ್ರೀದೇವಿ ನಾಯಕ್, ವಕೀಲ ಬಸನಗೌಡ ದೇಸಾಯಿ,ವೀರಣ್ಣ ಬಳೆ ಸಾಹುಕಾರ್,ನರಸಣ್ಣ ನಾಯಕ, ಚಂದಪ್ಪ ಬುದ್ಧಿನ್ನಿ, ಮಾನಪ್ಪ ಕಾವಲಿ,ಮಕ್ತುಮ್ ಪರಾಶಿ,ವೆಂಕಣ್ಣ ಯಾರಕಮಟ್ಟಿ, ಶಾಂತಪ್ಪ ಬಳೆ,ಖುರ್ಶಿದ್ ಪಟೇಲ್,ಹನುಮಯ್ಯ, ಬೀಮನಗೌಡ, ಶಂಕರಗೌಡ,ಹುಸೇನ್ ನಾಸಿ,ಹೈದೆರ್ ಸಾಬ್ ಮುಲ್ಲಾ, ಯಮನೂರಪ್ಪ ಕರ್ನಾಳ, ಮೌನೇಶ್ ಹೊಸೂರು, ಬಸವರಾಜ್ ಹೊಸೂರು, ರಂಗಣ್ಣ ಕೋಲಕಾರ, ಭೀಮಣ್ಣ ಗುಮೇದಾರ, ಶ್ರೀಧರ ದೇಸಾಯಿ, ನಂದಪ್ಪ ಪಿ. ಮಡ್ಡಿ, ಬಾಳಪ್ಪ ಬಾಳಿಮನಿ, ದುರುಗಪ್ಪ ರಾಮಪಳ್ಳಿ, ಮೌನೇಶ್ ಜಾಲಹಳ್ಳಿ, ತಿಮ್ಮಣ್ಣ ದಿವಾನ್, ಬಸವರಾಜ್, ಭೀಮಣ್ಣ ನಾಯಕ, ತಮ್ಮಣ್ಣ, ಭೀಮರಾಯ ಮಕಾಶಿ, ಹನುಮಂತ್ ಮಡಿವಾಳ್, ತಮ್ಮಣ್ಣ ಹೆರುಂಡಿ, ರಂಗನಾಥ ಮುರಾಳ್, ಅಂಬಯ್ಯ, ಅಯ್ಯಪ್ಪ ಸ್ವಾಮಿ ಗಣಜಲಿಮಠ, ರಮೇಶ್ ಬಾಗೂರು, ರಂಗಪ್ಪ ಬಂಡಿ, ಗುಡದಪ್ಪ ಮಂಡಲಗುಡ್ಡ, ಯಂಕಪ್ಪ ಮುರಾಳ, ರಂಗಪ್ಪ ಜೋಳದಹಡಗಿ, ಶಿವಪ್ಪ ಜಲ್ಲಿ, ಬಸವರಾಜ ದೊಡ್ಡಮನಿ, ರಂಗಪ್ಪ ಕಾವಲಿ, ಶಿವಪ್ಪ ಬೆಲ್ಲದ, ತಿಮ್ಮಣ್ಣ ಬುಂಕಲದೊಡ್ಡಿ, ಶರಣಪ್ಪ ರಂಗಪ್ಪ ಬಿಳಾರ್, ಮೌನೇಶ್ ಬೆಂಗಂಡಿ ಸೇರಿದಂತೆ ಹೊಸೂರು ಸಿದ್ದಾಪುರ ಗ್ರಾಮದ ನೂರಾರು ಗ್ರಾಮಸ್ಥರು ಭಾಗವಹಿಸಿದ್ದರು.

ವಚನ ದರ್ಶನ

ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ,ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯ,ಸತ್ಯದ ಬ?ದಿಂದ ಅಸತ್ಯದ ಕೇಡು ನೋಡಯ್ಯ,ಪರುಷದ ಬಲದಿಂದ ಅವಲೋಹದ ಕೇಡು ನೋಡಯ್ಯ,ಕೂಡಲಸಂಗನ ಶರಣರನುಭಾವದಿಂದ ಎನ್ನ ಭವದ ಕೇಡು ನೋಡಯ್ಯ

12ನೇ ಶತಮಾನದ ಮಹಾನ್ ಸಾಮಾಜಿಕ ಕ್ರಾಂತಿಕಾರಿ, ಶಿವಶರಣ ವಿಶ್ವಗುರು ಬಸವಣ್ಣನವರ ಅತ್ಯಂತ ಪ್ರಸಿದ್ಧವಾದ ವಚನದ್ದಾಗಿದೆ.

ಈ ವಚನದಲ್ಲಿ ಬಸವಣ್ಣನವರು ಸಕಾರಾತ್ಮಕ ಶಕ್ತಿಗಳು ಹೇಗೆ ನಕಾರಾತ್ಮಕತೆಯನ್ನು ಅಳಿಸಿಹಾಕುತ್ತವೆ ಎಂಬುದನ್ನು ಸುಂದರವಾದ ದೃಷ್ಟಾಂತಗಳ ಮೂಲಕ ವಿವರಿಸಿದ್ದಾರೆ.

ಜ್ಞಾನದ ಬಲದಿಂದ ಅಜ್ಞಾನದ ಕೇಡು ನಿಜವಾದ ಜ್ಞಾನ ಅಥ–'ವಾ ತಿಳುವಳಿಕೆ ಮೂಡಿದಾಗ, ಮನುಷ್ಯನಲ್ಲಿರುವ ಮೂಢನಂಬಿಕೆ, ಅಹಂಕಾರ ಮತ್ತು ಅಜ್ಞಾನಗಳು ತಾವಾಗಿಯೇ ನಾಶವಾಗುತ್ತವೆ.

ಜ್ಯೋತಿಯ ಬಲದಿಂದ ತಮಂಧದ ಕೇಡು ಒಂದು ಸಣ್ಣ ದೀಪದ ಬೆಳಕು ಜ್ಯೋತಿ ಹೇಗೆ ಮೈಲಿಗಟ್ಟಲೆ ಆವರಿಸಿರುವ ಕಡುಗತ್ತಲನ್ನು ತಮಂಧ ಕ್ಷಣಮಾತ್ರದಲ್ಲಿ ಓಡಿಸುತ್ತದೆಯೋ, ಹಾಗೆ ಸತ್ಚಿಂತನೆಗಳು ಮನದ ಕತ್ತಲನ್ನು ದೂರಮಾಡುತ್ತವೆ.

ಸತ್ಯದ ಬಲದಿಂದ ಅಸತ್ಯದ ಕೇಡು ಸತ್ಯಕ್ಕೆ ಎಂದಿಗೂ ಸಾವಿಲ್ಲ. ಸತ್ಯದ ಶಕ್ತಿಯ ಮುಂದೆ ಯಾವುದೇ ಸುಳ್ಳು ಅಥವಾ ಅಸತ್ಯವು ಹೆಚ್ಚು ಕಾಲ ನಿಲ್ಲಲಾರದು.

ಪರುಷದ ಬಲದಿಂದ ಅವಲೋಹದ ಕೇಡು 'ಪರುಷ ಮಣಿ' ಸ್ಪರ್ಶಿಸಿದ ತಕ್ಷಣ ಕೀಳು ದರ್ಜೆಯ ಲೋಹವ ಅವಲೋಹ ಹೇಗೆ ಅಪರಂಜಿ ಚಿನ್ನವಾಗಿ ಬದಲಾಗುತ್ತದೆಯೋ, ಹಾಗೆ ಶ್ರೇಷ್ಠ ವಿಚಾರಗಳು ಸಾಮಾನ್ಯ ಮನುಷ್ಯನನ್ನು ಉತ್ತಮ ಗುಣವುಳ್ಳವನನ್ನಾಗಿ ಪರಿವರ್ತಿಸುತ್ತವೆ.

ಕೂಡಲಸಂಗನ ಶರಣರ ಅನುಭಾವದಿಂದ ಭವದ ಕೇಡು ಕೊನೆಯದಾಗಿ, ಬಸವಣ್ಣನವರು ತಮ್ಮ ಆರಾಧ್ಯ ದೈವ ಕೂಡಲಸಂಗಮದೇವನನ್ನು ನೆನೆಯುತ್ತಾ, ಸತ್ಪುರುಷರ ಶರಣರ ದಿವ್ಯ ಸನ್ನಿಧಿ ಹಾಗೂ ಅವರ ಜ್ಞಾನದ ಅನುಭವದ ಒಡನಾಟದಿಂದ ನನ್ನ ಜನ್ಮ–ಮರಣಗಳ ಸಂಸಾರ ಚಕ್ರದ ಭವದ ಕಷ್ಟಗಳು ಮತ್ತು ಅಜ್ಞಾನದ ಕೇಡುಗಳು ಸಂಪೂರ್ಣವಾಗಿ ನಿವಾರಣೆಯಾಗುತ್ತವೆ ಎಂದು ಮಾರ್ಮಿಕವಾಗಿ ಹೇಳಿದ್ದಾರೆ ವಚನಗಳು ಮನುಕುಲದ ದಾರಿದೀಪ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ
ಅಂತರಗಂಗಿ–ಸಿಂಧನೂರು. 998094144

ಮಾಜಿ ಸಿಎಂ ಸಿದ್ದರಾಮಯ್ಯಗೆ ಕುರಿಮರಿ ಉಡುಗೊರೆ: ಶಾಸಕ ಪ್ರಕಾಶ್ ಕೋಳಿವಾಡರಿಂದ ವಿನೂತನ ಸ್ವಾಗತ

❑ ನೈಜ್ಯ ದೆಸೆ ನ್ಯೂಸ್

ತಾಂಡವಪುರ ಸೆಪ್ಟೆಂಬರ್ 24 ರಾಣೆಬೆನ್ನೂರು ವಿಧಾನಸಭೆ ಕ್ಷೇತ್ರದ ಶಾಸಕ ಪ್ರಕಾಶ್ ಕೋಳಿವಾಡ ಹಾಗೂ ಕಾಂಗ್ರೆಸ್ ಮುಖಂಡರು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ರವರಿಗೆ ಅವರ ನಿವಾಸದಲ್ಲಿ ಕುರಿಮರಿಯನ್ನು ನೀಡುವ ಮೂಲಕ ವಿನೂತನವಾಗಿ ಸ್ವಾಗತ ಕೋರಿದರು



ಮುಖಂಡರು ನೀಡಿದ ಸ್ವಾಗತವನ್ನು ಸ್ವೀಕರಿಸಿ ಮಾತನಾಡಿದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ನಿಮ್ಮ ಪ್ರೀತಿ ಅಭಿಮಾನಕ್ಕೆ ನಾವು ಸದಾ ಚಿರಋಣಿಯಾಗಿರುತ್ತೇವೆ ಎಂದು ಹೇಳಿದ ಸಿದ್ದರಾಮಯ್ಯನವರು ನಿಮ್ಮ ಪ್ರೀತಿಯ ಅಭಿಮಾನ ವಿಶ್ವಾಸ ಇನ್ನು ಮುಂದೆಯೂ ಸಹ ಹೀಗೆ ಇರಲಿ ಎಂದು ತಿಳಿಸಿದರು ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರು ಶಾಸಕ ಪ್ರಕಾಶ್ ಕೋಳಿವಾಡಹಾಗೂ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಹಾಜರಿದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

ರಾಜ್ಯಮಟ್ಟದ ಪತ್ರಕರ್ತರ ಸಮ್ಮೇಳನ ಯಶಸ್ವಿಗೆ ಸಂಪೂರ್ಣ ಸಹಕಾರ – ಬೆಂಗಳೂರಿನಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಅಜಯ್ ಸಿಂಗ್ ಭರವಸೆ

❑ ನೈಜ್ಯ ದೆಸೆ ನ್ಯೂಸ್

ರಾಯಚೂರು ರಾಯಚೂರಿನಲ್ಲಿ ನಡೆಯಲಿರುವ 41ನೇ ರಾಜ್ಯ ಮಟ್ಟದ ಪತ್ರಕರ್ತರ ಸಮ್ಮೇಳನದ ಯಶಸ್ವಿಗೆ ಸಂಪೂರ್ಣ ಸಹಕಾರ ನೀಡುವುದಾಗಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಅಜಯ್ ಧರ್ಮಸಿಂಗ್ ತಿಳಿಸಿದರು ಬೆಂಗಳೂರಿನಲ್ಲಿ ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ನೇತೃತ್ವದಲ್ಲಿ ಭೇಟಿಯಾದ ರಾಯಚೂರು ಜಿಲ್ಲೆಯ ಪತಕರ್ತರ ಜೊತೆ ಸಮ್ಮೇಳನ ಪೂರ್ವಭಾವಿಯಾಗಿ ಮಾತುಕತೆ ನಡೆಸಿದರು.

ರಾಯಚೂರಿನಲ್ಲಿ ಸಮ್ಮೇಳನ ನಡೆಯುತ್ತಿರುವುದು ಬಹಳ ಖುಷಿಯ ವಿಚಾರ. ಸಮ್ಮೇಳನದ ಎಲ್ಲಾ ಸಿದ್ಧತೆಗಳನ್ನು ಶೀಘ್ರದಲ್ಲಿ ಆರಂಭಿಸುವ ಕುರಿತು ಸಭೆ ನಡೆಸಲಾಗುವುದು. ಸಮ್ಮೇಳನದ ಎಲ್ಲಾ ಕೆಲಸ



ಕಾರ್ಯಗಳು ಅಚ್ಚುಕಟ್ಟಾಗಿ ನಿರ್ವಹಿಸೋಣ. ಎಲ್ಲರೂ ಸಹಕಾರದೊಂದಿಗೆ ಒಗ್ಗೂಡಿ ಕೆಲಸ ಮಾಡಬೇಕಿದೆ ಎಂದು ತಿಳಿಸಿದರು. ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಮಾತನಾಡಿ, ಕಳೆದ ಬಾರಿ ಬೀದರ್ ನಲ್ಲಿ ನಡೆದ 40ನೇ ರಾಜ್ಯ ಮಟ್ಟದ ಪತ್ರಕರ್ತರ ಸಮ್ಮೇಳನ ಯಶಸ್ವಿಯಾಗಿದ್ದು, ರಾಯಚೂರಿನಲ್ಲಿ ಕೂಡ ಅದ್ದೂರಿಯಾಗಿ ಸಮ್ಮೇಳನ ನಡೆಸಬೇಕಿದೆ. ಸಮ್ಮೇಳನಕ್ಕೆ ಈಗಿನಿಂದಲೇ ಎಲ್ಲಾ ರೀತಿಯ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ತಿಳಿಸಿದರು.

ಜಿಲ್ಲಾಧ್ಯಕ್ಷ ಆರ್ ಗುರುನಾಥ್, ರಾಜ್ಯ ಸಮಿತಿ ಸದಸ್ಯ ಬಸವರಾಜ ನಾಗಡದಿನ್ನಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿದ್ದಯ್ಯ ಸ್ವಾಮಿಕುಕನೂರು, ಕಾರ್ಯಕಾರಿ ಸಮಿತಿ ಸದಸ್ಯರಾದ ವಿಶ್ವನಾಥ್ ಹೂಗಾರ್, ನೀಲಕಂಠ ಸ್ವಾಮಿ, ಪ್ರಸನ್ನ ಜೈನ್, ಲಕ್ಷ್ಮಣ್ ಕಪಗಲ್, ಪತ್ರಕರ್ತರಾದ ರಾಮಕೃಷ್ಣ ದಾಸರಿ, ಚನ್ನಬಸವ ಬಾಗಲವಾಡ, ಖಾನ್ ಸಾಬ್ ಮೊಮಿನ್, ಲಿಂಗಸುಗೂರು ತಾಲೂಕ ಅಧ್ಯಕ್ಷ ಶಿವರಾಜ್ ಕೆಂಭಾವಿ ಸೇರಿದಂತೆ ಇತರರು ಇದ್ದರು.

ಜಾಲಹಳ್ಳಿ ಬಳಿ ಭೀಕರ ರಸ್ತೆ ಅಪಘಾತ: ಶಿಕ್ಷಕ ಸೇರಿ ಇಬ್ಬರು ಸಾವು, ಇಬ್ಬರಿಗೆ ಗಂಭೀರ ಗಾಯ
ಜಲಧಾರೆ ಯೋಜನೆ ಕಾಮಗಾರಿಯಲ್ಲಿ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳದ ಆರೋಪ

❑ ನೈಜ್ಯ ದೆಸೆ ನ್ಯೂಸ್

ದೇವದುರ್ಗ/ಜಾಲಹಳ್ಳಿ, ಸೆ.24: ತಾಲ್ಲೂಕಿನ ಜಾಲಹಳ್ಳಿ ಗ್ರಾಮದ ಜೆ.ಜೆ. ಕಲ್ಯಾಣ ಮಂಟಪದ ಬಳಿ ಬುಧವಾರ ರಾತ್ರಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಶಿಕ್ಷಕ ಸೇರಿ ಇಬ್ಬರು ಮೃತಪಟ್ಟಿದ್ದು, ಇಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಮೃತರನ್ನು ಹೆಚ್.ಸಿದ್ಧಾಪುರ ಗ್ರಾಮದ ಶಿಕ್ಷಕ ನಿಂಗಪ್ಪ (27) ಹಾಗೂ ಜಾಲಹಳ್ಳಿಯ ಕೂಲಿ ಕಾರ್ಮಿಕ ಹನುಮಂತ (45) ಎಂದು ಗುರುತಿಸಲಾಗಿದೆ. ಗಾಯಾಳುಗಳಾದ ರಾಮಲಿಂಗಪ್ಪ ಹಾಗೂ ರಂಗನಾಥ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ದೇವದುರ್ಗ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಘಟನೆ ವಿವರ ಬುಧವಾರ (ಸೆ.23) ರಾತ್ರಿ





ಸುಮಾರು 7 ಗಂಟೆಗೆ ಜಾಲಹಳ್ಳಿ?ತಿಂತಿಣಿ ಬ್ರಿಡ್ಜ್ ಮುಖ್ಯ ರಸ್ತೆಯ ಜೆ.ಜೆ. ಕಲ್ಯಾಣ ಮಂಟಪದ ಬಳಿ ನಿಂಗಪ್ಪ ಅವರು ನಡೆದುಕೊಂಡು ಹೋಗುತ್ತಿದ್ದರು. ಈ ಸಂದರ್ಭದಲ್ಲಿ ಜಲಧಾರೆ ಯೋಜನೆಯ ಕಾಮಗಾರಿಗಾಗಿ ರಸ್ತೆ ಬದಿಯಲ್ಲಿ ಯಾವುದೇ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳದೆ ಮಣ್ಣು ಅಗೆಯಲಾಗಿದ್ದು, ಮಣ್ಣಿನ ರಾಶಿ ಹಾಕಲಾಗಿ–ತ್ತು ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಮಣ್ಣಿನ ರಾಶಿಯನ್ನು ದಾಟಿಕೊಂಡು ಮುಂದೆ ಸಾಗುತ್ತಿದ್ದ ವೇಳೆ, ಹಿಂದಿನಿಂದ ಅತಿವೇಗ ಹಾಗೂ ನಿರ್ಲಕ್ಷ್ಯದಿಂದ ಬಂದ ಬುಲೇರೋ ವಾಹನ (ಎಂ–35–ಃ–5608) ನಿಂಗಪ್ಪ ಅವರಿಗೆ ಢಿಕ್ಕಿ ಹೊಡೆದಿದೆ ಎನ್ನಲಾಗಿದೆ. ಬಳಿಕ ಅದೇ ಮಾರ್ಗದಲ್ಲಿ ನಡೆದುಕೊಂಡು ಹೋಗುತ್ತಿದ್ದ ಹನುಮಂತ ಅವರಿಗೂ ವಾಹನ ಢಿಕ್ಕಿ ಹೊಡೆದಿದ್ದು, ನಂತರ ಎದುರಿನಿಂದ ಮೋಟಾರ್ ಸೈಕಲ್‌ನಲ್ಲಿ ಬರುತ್ತಿದ್ದ ರಾಮಲಿಂಗಪ್ಪ ಹಾಗೂ ರಂಗನಾಥ ಅವರಿಗೂ ಸರಣಿ ಢಿಕ್ಕಿ ಹೊಡೆದಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಅಪಘಾತದ ಬಳಿಕ ಬುಲೇರೋ ಚಾಲಕ ವಾಹನವನ್ನು ನಿಲ್ಲಿಸದೇ ಸ್ಥಳದಿಂದ ಪರಾರಿಯಾಗಿದ್ದಾನೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ. ಅಪಘಾತದಲ್ಲಿ ಹನುಮಂತ ಅವರು ಸ್ಥಳದಲ್ಲೇ ಮೃತಪಟ್ಟಿದ್ದು, ಗಂಭೀರವಾಗಿ ಗಾಯಗೊಂಡಿದ್ದ ನಿಂಗಪ್ಪ ಅವರನ್ನು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ.


ಪ್ರಕರಣ ದಾಖಲು ಈ ಕುರಿತು ಮೃತ ನಿಂಗಪ್ಪ ಅವರ ಸಹೋದರ ಸಿದ್ದಪ್ಪ ನೀಡಿದ ದೂರಿನ ಆಧಾರದ ಮೇಲೆ ಜಾಲಹಳ್ಳಿ ಪೊಲೀಸ್ ಠಾಣೆಯಲ್ಲಿ ಬುಲೇರೋ ಚಾಲಕ ಹಾಗೂ ರಸ್ತೆ ಕಾಮಗಾರಿಯ ಸಂದರ್ಭದಲ್ಲಿ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳದೆ ಮಣ್ಣು ಅಗೆಯಲಾಗಿತ್ತು ಎನ್ನಲಾದ ಜಲಧಾರೆ ಯೋಜನೆಯ ಕಾಮಗಾರಿಯ ಗುತ್ತಿಗೆದಾರರ ವಿರುದ್ಧ ಪ್ರಕರಣ ದಾಖಲಾಗಿದೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ರೈತರ ಮೂಲಭೂತ ಸೌಲಭ್ಯಗಳನ್ನು ಒದಗಿಸುವಂತೆ ಹಸಿರು ಸೇನೆ ಒತ್ತಾಯ

❑ ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ತಾಲೂಕಿನ ನಿಲೋಗಲ್ ಗ್ರಾಮದಲ್ಲಿ ರೈತರ ಜಮೀನುಗಳಿಗೆ ಹೋಗುವ ದಾರಿಗಳಲ್ಲಿ. ಮುಳ್ಳು ಕಂಚಿಗಳು ಹಾಗೂ ಹಾಲಿ ಮುಳ್ಳುಗಳು ಹಬ್ಬಿ, ಎಲ್ಲೆಂದರಲ್ಲಿ ತಗ್ಗು ಗುಂಡಿಗಳು ನಿರ್ಮಾಣವಾಗಿದ್ದು, ರೈತರ ಓಡಾಟಕ್ಕೆ ತುಂಬಾ ತೊಂದರೆಯಾಗುತ್ತಿದೆ. ರೈತರ ಮೂಲಭೂತ ಸೌಲಭ್ಯಗಳನ್ನು ಒದಗಿಸುವಂತೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ತಾಲೂಕ ಅಧ್ಯಕ್ಷ ಸಂಗನಗೌಡ ಹೊಸೂರು ಕಾರ್ಯನಿರ್ವಾಹಕ ಅಧಿಕಾರಿಗೆ ಮನವಿಯನ್ನು ಸಲ್ಲಿಸಿದರು .

ಅಧಿಕಾರಿಗಳ ಗಮನಕ್ಕೆ ತಂದರೂ



ಕೂಡ ಅಧಿಕಾರಿಗಳು ಪಂಚಾಯತಿಯಲ್ಲಿ ಫಂಡ್ ಇಲ್ಲ ಎಂದು ಬೇಜವಾಬ್ದಾರಿ ಹೇಳಿಕೆಗಳನ್ನು ಹಾಗೂ ಮೇಲಾಧಿಕಾರಿಗಳಿಗೆ ಕೇಳಬೇಕೆಂದು ಹೇಳುತ್ತಿದ್ದಾರೆ. ಇದನ್ನು ಪರಿಗಣಿಸಿ ನಿಲೋಗಲ್ ಗ್ರಾಮದಲ್ಲಿರುವ ರೈತರ ಜಮೀನುಗಳಿಗೆ ಹೋಗುವ ದಾರಿಗಳಲ್ಲಿರುವ ಜಾಲಿ ಹಾಗೂ ಮುಳ್ಳು ಕಂಟಿಗಳನ್ನು ತೆಗೆಯಿಸಿ ಹಾಗೂ ತಗ್ಗು ಗುಂಡಿಗಳನ್ನು ಮುಚ್ಚಿ ರೈತರ ಓಡಾಟಕ್ಕೆ ಸುಗಮ ದಾರಿಯನ್ನು ನಿರ್ಮಿಸಿ ಕೊಡಬೇಕಾಗಿ ಮತ್ತು ಗ್ರಾಮದಲ್ಲಿರುವ ನಿಜವಾದ ಬಡವರಿಗೆ ಹಾಗೂ ದನಕರುಗಳು ಇದ್ದ ರೈತರಿಗೆ ಹೊಸ ಜಾನುವಾರು ಶೆಡ್ಡುಗಳನ್ನು ನಿರ್ಮಿಸಿಕೊಡಬೇಕು ಒಂದು ವೇಳೆ ಈ ಬಾರಿಯೂ ಕೂಡ ನಿರ್ಲಕ್ಷ್ಯ ವಹಿಸಿದರೆ ಇತರೆ ಜನಪರ ಸಂಘಟನೆಗಳೊಂದಿಗೆ ತಾಲೂಕ ಪಂಚಾಯತಿ ಕಾರ್ಯಾಲಯಕ್ಕೆ ಮುತ್ತಿಗೆ ಹಾಕಲಾಗುವುದೆಂದು ಒತ್ತಾಯಿಸಿದರು . ಈ ಸಂದರ್ಭದಲ್ಲಿ ಖಾಜಾವಲಿ ಜಾಗೀರ ನಂದಿಹಾಳ , ದೊಡ್ಡಪ್ಪ ನಿಲೋಗಲ್ , ಶರಣಬಸವ ಹತ್ತಿಗುಡ್ಡ , ಕೊಡ್ಲೇಪ್ಪ ಸೇರಿದಂತೆ ಇತರರು ಇದ್ದರು .

ಕಂಪ್ಲಿ ಜೆಪಿಟಿ ಶಿಕ್ಷಕರ ಸಂಘದ ಚುನಾವಣೆ: ಅವಿರೋಧ ಆಯ್ಕೆ ನಿಶ್ಚಿತ

❑ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ: ಇಲ್ಲಿನ ಕರ್ನಾಟಕ ರಾಜ್ಯ (6ರಿಂದ 8) ಪದವೀಧರ ಪ್ರಾಥಮಿಕ ಶಿಕ್ಷಕರ ಸಂಘದ (ಜೆಪಿಟಿ) ಕಂಪ್ಲಿ ತಾಲೂಕು ಘಟಕದ 2026–31ನೇ ಸಾಲಿನ ಚುನಾವಣೆಗೆ ಒಟ್ಟು 12 ನಾಮಪತ್ರಗಳು ಸಲ್ಲಿಕೆಯಾಗಿವೆ ಎಂದು ಚುನಾವಣಾಧಿಕಾರಿ ಹಾಗೂ ನಿವೃತ್ತ ಶಿಕ್ಷಕ ವೀರೇಶ್ ತಿಳಿಸಿದ್ದಾರೆ.ಪಟ್ಟಣದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಚುನಾವಣಾ ಪ್ರಕ್ರಿಯೆಗಳು ನಡೆಯುತ್ತಿದ್ದು, ಒಟ್ಟು 12 ನಿರ್ದೇಶಕರ ಸ್ಥಾನಗಳಿಗೆ ಚುನಾವಣೆ ಪ್ರಕಟಿಸಲಾಗಿದೆ.

ಇದರಲ್ಲಿ 8 ಪುರುಷ ಹಾಗೂ 4 ಮಹಿಳಾ ಸ್ಥಾನಗಳು ಒಳಗೊಂಡಿವೆ.



ವಿಶೇಷವೆಂದರೆ, ನಿಗದಿತ 12 ಸ್ಥಾನಗಳಿಗೆ ಸರಿಯಾಗಿ 8 ಪುರುಷರು ಮತ್ತು 4 ಮಹಿಳೆಯರು ಸೇರಿ ಒಟ್ಟು 12 ಅಭ್ಯರ್ಥಿಗಳು ಮಾತ್ರ ನಾಮಪತ್ರ ಸಲ್ಲಿಸಿದ್ದಾರೆ. ಜೆಪಿಟಿ ಶಿಕ್ಷಕರಾದ ಮಂಜುನಾಥ, ಉಮೇಶ, ಗಾದಿಲಿಂಗಪ್ಪ, ಪಂಪನಗೌಡ, ಬಸವರಾಜ, ಪಾಂಡುರಂಗ, ವಾಲ್ಮೀಕಿ ಆಂಜಿನೇಯ್ಯ, ಎನ್. ಶಿವಕುಮಾರ, ಸುನೀತಕುಮಾರಿ, ಜ್ಯೋತಿ ಇಟಗಿ, ರಾಜೇಶ್ವರಿ ಹಾಗೂ ರೇಖಾ ನಾಮಪತ್ರ ಸಲ್ಲಿಸಿದ ಅಭ್ಯರ್ಥಿಗಳಾಗಿದ್ದಾರೆ. ಸೆಪ್ಟೆಂಬರ್ 23 ರಂದು ಸಲ್ಲಿಕೆಯಾದ ನಾಮಪತ್ರಗಳ ಪರಿಶೀಲನೆ ನಡೆದಿದ್ದು, ಸೆಪ್ಟೆಂಬರ್ 25 ರಂದು ಅಧಿಕೃತವಾಗಿ ಅಂತಿಮ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಲಾಗುವುದು ಎಂದು ಚುನಾವಣಾಧಿಕಾರಿಗಳು ಮಾಹಿತಿ ನೀಡಿದ್ದಾರೆ. ಒಟ್ಟು ಸ್ಥಾನಗಳಿಗೆ ಸಮನಾಗಿ ನಾಮಪತ್ರಗಳು ಸಲ್ಲಿಕೆಯಾಗಿರುವುದ–ರಿಂದ, ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗುವ ಸಾಧ್ಯತೆ ದಟ್ಟವಾಗಿದೆ.

ಚುನಾವಣಾ ಆಯೋಗದ ನಡೆ ಪ್ರಜಾಪ್ರಭುತ್ವಕ್ಕೆ ಮಾರಕ: ಸಾರ್ವಜನಿಕ ಚರ್ಚೆಗೆ ಕಾಂಗ್ರೆಸ್ ಮುಖಂಡರ ಆಗ್ರಹ

❑ ನೈಜ್ಯ ದೆಸೆ ನ್ಯೂಸ್

ತಾಂಡವಪುರ: ಮತದಾರನ ಮತವೇ ಪ್ರಜಾಪ್ರಭುತ್ವದ ಮೂಲ ಅಡಿಪಾಯ. ಚುನಾವಣಾ ಆಯೋಗದ ಕು–ರಿತು ಇತ್ತೀಚೆಗೆ ಬಹಿರಂಗವಾಗಿರುವ ಸಂಗತಿಗಳು ಪ್ರಜಾಪ್ರಭುತ್ವದ ಆಶಯಕ್ಕೆ ಧಕ್ಕೆಗೀಡು ಮಾಡಿ, ಗಂಭೀರ ಸಾರ್ವಜನಿಕ ಚರ್ಚೆಗೆ ಅರ್ಹವಾಗಿವೆ ಎಂದು. ಕಾಂಗ್ರೆಸ್ ಮುಖಂಡರು ಮಾಧ್ಯಮ ಗೋಷ್ಠಿಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದರು Indian Express ತನಿಖಾ ವರದಿ ಪ್ರಕಾರ, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ನೇತೃತ್ವದಲ್ಲಿ ನಡೆದ ನಿರ್ಧಾರಗಳ ಕುರಿತು ಚುನಾವಣಾ ಆಯುಕ್ತರಾದ ಸುಖಬೀರ್ ಸಿಂಗ್ ಸಂಧು ಹಾಗೂ ವಿವೇಕ್ ಜೋಶಿ ಅವರು ಕಳೆದ 10 ತಿಂಗಳಲ್ಲಿ ಕನಿಷ್ಠ 14 ಬಾರಿ ಲಿಖಿತ ಆಕ್ಷೇಪ ದಾಖಲಿಸಿರುವ ವರದಿಗಳು ಗಂಭೀರ ಆತಂಕಕ್ಕೆ ಕಾರಣವಾಗಿವೆ.

ಗೋವಾದಲ್ಲಿ ಅರ್ಹರೆಂದು ಗುರುತಿಸಲಾದ 97 ಮತದಾರರ ಹೆಸರುಗಳನ್ನು ಸಾಫ್ಟ್‌ವೇರ್ ವ್ಯವಸ್ಥೆಯ ಕಾರಣದಿಂದ ಅಂತಿಮ ಪಟ್ಟಿಗೆ ಸೇರಿಸಲು ಸಾಧ್ಯವಾಗಲಿಲ್ಲ ಎಂಬುದೂ ವರದಿಯಾಗಿದೆ.



ಇದೇ ವೇಳೆ, ಚುನಾವಣಾ ಆಯೋಗ ತನ್ನ ಎಲ್ಲ ನಿರ್ಧಾರಗಳು, ಖಋಖ ಸೇರಿದಂತೆ, ಮೂವರು ಆಯುಕ್ತರ ಅನುಮೋದನೆಯೊಂದಿಗೆ ಏಕಮತದಿಂದ ನಡೆದಿವೆ ಎಂದು ಸ್ಪಷ್ಟಪಡಿಸಿದೆ. ಈ ಪರಸ್ಪರ ಭಿನ್ನ ಹೇಳಿಕೆಗಳ ಹಿನ್ನೆಲೆಯಲ್ಲಿ, ದೇಶದ ಜನತೆಗೆ ಈ ಕೆಳಗಿನ ಅಂಶಗಳನ್ನು ಕು–ರಿತು ಸಂಪೂರ್ಣ ದಾಖಲೆ ಆಧಾರಿತ ಸಾರ್ವಜನಿಕ ವಿವರಣೆ ನೀಡಬೇಕೆಂದು ಆಗ್ರಹಿಸುತ್ತಿವೆ ಎಂದರು

1. ಆಯೋಗದೊಳಗೆ ದಾಖಲಾದ ಆಕ್ಷೇಪಗಳಿಗೆ ಸ್ಪಷ್ಟ ಉತ್ತರ ನೀಡಬೇಕು.
2. ಈಂಡಿಟ–6 ಬದಲಾವಣೆಯ ಕಾನೂನುಬದ್ಧ ಆಧಾರವನ್ನು ಬಹಿರಂಗಪಡಿಸಬೇಕು.
3. ಮತದಾರರ ಡೇಟಾಬೇಸ್‌ಗೆ ಯಾ–ರಿಗೆಲ್ಲಾ ಪ್ರವೇಶ ಮತ್ತು ಬದಲಾವಣೆ ಮಾಡುವ ಅಧಿಕಾರವಿದೆ ಎಂಬುದನ್ನು ಸ್ಪಷ್ಟಪಡಿಸಬೇಕು.
4. ಪಶ್ಚಿಮ ಬಂಗಾಳದ 16.10 ಲಕ್ಷ ಮೇಲ್ಮನವಿಗಳ ಮೂಲ ಮತ್ತು ಅಧಿಕಾರವನ್ನು ಬಹಿರಂಗಪಡಿಸಬೇಕು.
5. ಖಋಖ ಮತ್ತು ಮತದಾರರ ಪಟ್ಟಿಯ ನಿರ್ವಹಣೆ ಕುರಿತು ಸ್ವತಂತ್ರ ಹಾಗೂ ಪಾರದರ್ಶಕ ಪರಿಶೀಲನೆ ನಡೆಸಬೇಕು.
6. ಅರ್ಹ ಮತದಾರರ ಹೆಸರು ಯಾವುದೇ ಕಾರಣಕ್ಕೂ ಅನ್ಯಾಯವಾಗಿ ಕೈಬಿಡದಂತೆ ಬಲವಾದ ಸುರಕ್ಷತಾ ವ್ಯವಸ್ಥೆ ರೂಪಿಸಬೇಕು.

ಚುನಾವಣಾ ಆಯೋಗ ಯಾವುದೇ ಸರ್ಕಾರದ ಪರವಾಗಿರಬಾರದು; ಅದು ಸಂವಿಧಾನದ ಪರ ಮತ್ತು ಪ್ರತಿಯೊಬ್ಬ ಮತದಾರನ ಹಕ್ಕಿನ ಪರ ನಿಲ್ಲಬೇಕು. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ನೇತೃತ್ವದ ಕಾರ್ಯವೈಖರಿ ಕುರಿತು ಎದ್ದಿರುವ ಪ್ರಶ್ನೆಗಳಿಗೆ ಸ್ಪಷ್ಟ ಉತ್ತರ ಮತ್ತು ಅಗತ್ಯವಿದ್ದರೆ ಸಾಂವಿಧಾನಿಕವಾಗಿ ಸೂಕ್ತ ಕ್ರಮ ಕೈಗೊಳ್ಳುವಂತೆ ರಾಷ್ಟ್ರಪತಿಗಳು ಮತ್ತು ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡುತ್ತೇವೆ ಎಂದರು ಮುಖಂಡರು ಚುನಾವಣೆಯ ಗೆಲುವು–ಸೋಲಿಗಿಂತ ಮತದಾರನ ಹಕ್ಕು ಮತ್ತು ಚುನಾವಣಾ ವ್ಯವಸ್ಥೆಯ ಮೇಲಿನ ವಿಶ್ವಾಸವೇ ಮುಖ್ಯ. ಎಂದರು

ಮೈಸೂರಿನ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಪಕ್ಷದ ವಕ್ತಾರ ಎಂ.ಲಕ್ಷ್ಮಣ್ ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬೀರಿಹುಂಡಿ ಬಸವಣ್ಣ ಮೈಸೂರು ಜಿಲ್ಲಾ ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಆರ್ ಮೂರ್ತಿ ಜಿಲ್ಲಾ ಪಂಚಾಯಿತ ಮಾಜಿ ಅಧ್ಯಕ್ಷ ಎಂ ರಾಮು ಹಾಗೂ ಮುಂತಾದವರು ಹಾಜರಿದ್ದರು.

ವರದಿಯ ಪ್ರಕಾರ,

* ಹೊಸ ಮತದಾರರ ನೋಂದಣಿಯ ಈಂಡಿಟ–6 ಬದಲಾವಣೆ
* ಮತದಾರರ ಹೆಸರುಗಳ ಸೇರ್ಪಡೆ ಮತ್ತು ತೆಗೆದುಹಾಕುವಿಕೆ
* ಚುನಾವಣಾ ಡೇಟಾಬೇಸ್‌ನ ಕೇಂದ್ರೀಕರಣ
* ಪಶ್ಚಿಮ ಬಂಗಾಳದ ಖಋಖಗೆ ಸಂಬಂಧಿಸಿದ 16.10 ಲಕ್ಷ ಮೇಲ್ಮನವಿಗಳು
* ಆಯೋಗದ ಹೆಸರಿನಲ್ಲಿ ನಡೆಯುವ ಸಂವಹನಗಳಿಗೆ ಅಗತ್ಯ ಅನುಮೋದನೆ ಮುಂತಾದ ವಿಷಯಗಳಿಗೆ ಆಕ್ಷೇಪಗಳು ಸಂಬಂಧಿಸಿವೆ.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101